# ಅಧ್ಯಾಯ–೧೦
# ಸಾಹಿತ್ಯ ಮತ್ತು ಸಂಸ್ಕೃತಿ

ಪಿರಿಯಾಪಟ್ಟಣ ತಾಲೂಕು ಚಾರಿತ್ರಿಕ, ಸಾಹಿತ್ಯಕ, ಜಾನಪದ, ಧಾರ್ಮಿಕ, ಕಲೆ ಮತ್ತು ವಾಸ್ತುಶಿಲ್ಪಗಳ ನೆಲೆಯಾಗಿದೆ. ವಿವಿಧ ಕ್ಷೇತ್ರಗಳಲ್ಲಿ ತಾಲೂಕಿನ ಸಾಧನೆಯನ್ನು ಈ ಮುಂದೆ ಸ್ಥೂಲವಾಗಿ ಪರಿಚಯಿಸಲಾಗಿದೆ.

**ಶಾಸನಗಳು**

**ಭಾಷೆ–ಸಾಹಿತ್ಯ :** ಈ ಶಾಸನಗಳಲ್ಲಿ ಸಾಹಿತ್ಯಕವಾಗಿ ಪ್ರೌಢಮಟ್ಟದ ರಚನೆಗಳು ಇಲ್ಲವೆಂದೇ ಹೇಳಬೇಕು. ಕದಂಬ ಶಾಸನ (ಸಂಖ್ಯೆ–೪೯) ಶುದ್ಧ ಸಂಸ್ಕೃತದಲ್ಲಿದೆ. ಮಾಕೋಡಿನ ಶಾಸನವು (ಸಂಖ್ಯೆ ೧೪೭) ತಲಾ ಒಂದೊಂದು ಮತ್ತೇಭವಿಕ್ರೀಡಿತ ಹಾಗೂ ಕಂದಪದ್ಯಗಳಿಂದ ಕೂಡಿದ ಶಾಸನ; ಇದರಲ್ಲಿ ಗದ್ಯವೇ ಇಲ್ಲ. ಪಿರಿಯಾಪಟ್ಟಣ ತಾಲ್ಲೂಕಿನ ಕೆಲವು ಶಾಸನ ಕವಿಗಳನ್ನು ಗಮನಿಸಬಹುದು. ಕೀರ್ತಿವರ (ಶಾಸನ ಸಂಖ್ಯೆ–೪೯), ಸೇನಬೋವ ಅಲ್ಲಪ್ಪ (ಸಂಖ್ಯೆ–೧೨೨), ಚೆನಪ್ಪ(ಸಂಖ್ಯೆ–೫೪), ರಾಯಣ್ಣ (ಸಂಖ್ಯೆ–೧೩೪), ನಂಜಪ್ಪ (ಸಂಖ್ಯೆ–೨೦) ಇತ್ಯಾದಿ. ಮಲೋಜ (ಸಂಖ್ಯೆ–೪೫), ಕೇತ (ಸಂಖ್ಯೆ–೧೩೪) ಮುಂತಾದ ಕಂಡರಣೆಕಾರರ ಹೆಸರುಗಳೂ ಕೂಡ ನಮಗೆ ದೊರೆಯುತ್ತವೆ.

**ಸಾಹಿತ್ಯ**

**ಪ್ರಾಚೀನ ಕವಿಗಳು :** ಕನ್ನಡ ಸಾಹಿತ್ಯಕ್ಕೆ ಪಿರಿಯಾಪಟ್ಟಣ ತಾಲೂಕಿನ ಲೇಖಕರ ಕೊಡುಗೆ ಸ್ಮರಣೀಯವಾದದ್ದು. ಕವಿಗಳಾದ ರಾವಂದೂರಿನ ದೇವಪ್ಪ, ಪಿರಿಯಾಪಟ್ಟಣದ ದೊಡ್ಡಯ್ಯ, ಚಪ್ಪರದಹಳ್ಳಿಯ ಆದಿಯಪ್ಪ, ಕಲ್ಲಹಳ್ಳಿಯ ಮಂಗರಸ, ನಂಜುಂಡ ಕವಿ ಮತ್ತು ಹಳೇಬೀಡಿನ ಕುಮುದೇಂದು – ಈ ಎಲ್ಲರೂ ಪ್ರಾಚೀನ ಸಾಹಿತ್ಯ ಇತಿಹಾಸದಲ್ಲಿ ಚಿರಸ್ಥಾಯಿಯಾದವರು. ಈ ಹಳೆಯ ಪರಂಪರೆಯ ಜೊತೆಗೆ ಹೊಸ ತಲೆಮಾರಿನ ತಾಲೂಕಿನ ಲೇಖಕರೂ ತಮ್ಮ ಶ್ರೇಷ್ಠ ಸಾಹಿತ್ಯ ಸಾಧನೆಗಳ ಮೂಲಕ ಆಧುನಿಕ ಸಾಹಿತ್ಯದಲ್ಲಿ ಗುರುತಿಸಲ್ಪಟ್ಟಿದ್ದಾರೆ. ಪಿರಿಯಾಪಟ್ಟಣದ ದೊಡ್ಡಯ್ಯ ಜೈನ ಕವಿ. ಕನ್ನಡದಲ್ಲಿ ಚಂದ್ರಪ್ರಭಸಾಂಗತ್ಯ, ಸಂಸ್ಕೃತದಲ್ಲಿ ಭುಜಬಲಿಚರಿತೆ ಎಂಬ ಕಾವ್ಯಗಳನ್ನು ರಚಿಸಿದ್ದಾನೆ.

ರಾವಂದೂರು ಗ್ರಾಮದ ದೇವಪ್ಪ ತಾನು ಚಂಗಾಳ್ವರ ಸಚಿವನಾಗಿದ್ದನೆಂದು ಕಾವ್ಯದಲ್ಲಿ ಹೇಳಿಕೊಂಡಿದ್ದಾನೆ. ಈತನ ಕೃತಿ ರಾಮವಿಜಯ ಕಾವ್ಯದಲ್ಲಿ ೧೯ ಸಂಧಿಗಳು, ೨೫೬೩ ಪದ್ಯಗಳಿವೆ. ಜೈನಕವಿ ಆದಿಯಪ್ಪ ಧನ್ಯಕುಮಾರ ಚರಿತೆ ಮತ್ತು ಪಟಹಸ್ತನ ಚರಿತೆ ಎಂಬ ಎರಡು ಸಾಂಗತ್ಯ ಕೃತಿಗಳನ್ನು ರಚಿಸಿದ್ದಾನೆ. ಈತನ ಧನ್ಯಕುಮಾರ ಚರಿತೆಯಲ್ಲಿ ಸುಮಾರು ೪೧೦ ಪದ್ಯಗಳು, ಕೆಲವು ವೃತ್ತಗಳು ಇವೆ ಎಂದು ತಿಳಿದುಬಂದಿದೆ. ಪಟಹಸ್ತನ ಚರಿತೆಯು ನೀತಿ ನಿರೂಪಣೆಯ ಒಂದು ಕಿರುಕೃತಿಯಾಗಿದೆ.

**ಆಧುನಿಕ ಸಾಹಿತಿಗಳು :** ಸ್ವಾತಂತ್ರ್ಯಪೂರ್ವದ ಲೇಖಕರಾದ ಪಿ. ಸಿ. ವೀರಯ್ಯನವರು ೧೯೨೬ರಲ್ಲಿ 'ಶ್ರೀ ಕನ್ನಂಬಾಡಿ ಅಮ್ಮನವರ ಸಂಕ್ಷಿಪ್ತ ಚರಿತ್ರೆ' ಎಂಬ ಪುಸ್ತಿಕೆಯನ್ನು ಪ್ರಕಟಿಸಿದ್ದಾರೆ. ಪಿರಿಯಾಪಟ್ಟಣದ ಕಾಳಗಕ್ಕೆ ಸಂಬಂಧಪಟ್ಟ ವಿಚಾರಗಳು, ಜನಪದ ಕಾವ್ಯಗಳು ಮತ್ತು ಲಾವಣಿಗಳನ್ನೂ ಅವರು ಸಂಗ್ರಹಿಸಿದುದ್ದಾಗಿ ತಿಳಿದುಬರುತ್ತದೆ. ಸ್ವಾತಂತ್ರ್ಯೋತ್ತರ ಮೊದಲ ದಿನಗಳಲ್ಲಿ ನಡೆದ ಜನಗಣತಿಯ ಕಾರ್ಯವನ್ನು ಪಿ.ಸಿ. ವೀರಯ್ಯ ಮತ್ತು ಶ್ಯಾನುಭೋಗ ಆರ್.ಎಸ್.ವಿ. ರಾಮಯ್ಯನವರು ನಡೆಸಿದ್ದರಿಂದ ಅಂದಿನ ಸರ್ಕಾರ ಅವರಿಬ್ಬರಿಗೂ ಅತ್ಯುತ್ತಮ ಜನಗಣತಿ ರಜತ ಪದಕ ಪ್ರಶಸ್ತಿಯನ್ನಿತ್ತು ಗೌರವಿಸಿತ್ತು. ಭೂವನಹಳ್ಳಿಯ ಡಿ. ಪದ್ಮನಾಭಶರ್ಮರು ಜೈನ ಸಾಹಿತ್ಯದಲ್ಲಿ ೧೫೦ಕ್ಕೂ ಅಧಿಕ ಕೃತಿಗಳನ್ನು ರಚಿಸಿದ್ದಾರೆ. ಬಾಲ್ಯದಲ್ಲೇ ಶಾಸ್ತ್ರ, ಆಗಮ, ಸಂಸ್ಕೃತ, ಪ್ರಾಕೃತಗಳನ್ನು ಕರತಲಾಮಲಕ ಮಾಡಿಕೊಂಡಿದ್ದ ಶರ್ಮರು ಕಥೆ, ಕಾದಂಬರಿ, ನಾಟಕ, ಕಾವ್ಯ, ವ್ಯಾಕರಣ, ಜ್ಯೋತಿಷ್ಯ, ಕಲೆ, ವಿಮರ್ಶೆ, ಸಿದ್ಧಾಂತ ಇವುಗಳಲ್ಲೆಲ್ಲ ಸಾಹಿತ್ಯ ಕೃಷಿ ಮಾಡಿದ್ದಾರೆ. 'ಶಬ್ದಮಣಿದರ್ಪಣಂ' ಮತ್ತು 'ಶಬ್ದಾನುಶಾಸನ' ವ್ಯಾಕರಣಕ್ಕೆ ಇವರು ಬರೆದ ವ್ಯಾಖ್ಯಾನ ಗ್ರಂಥಗಳು, 'ಶ್ರೀ ಮಹಾವೀರ ಚರಿತೆ' ಎಂಬ ಸಾಂಗತ್ಯ, ಬೃಹತ್ಕಾವ್ಯ, 'ತತ್ವಾರ್ಥ ಸೂತ್ರ', 'ಸತ್ಕ್ರಿಯಾದರ್ಪಣ' ಇವರ ಪ್ರಮುಖ ಕೃತಿಗಳು. ಇವರ ಸೇವೆಗೆ ಜೈನ ಸಾಹಿತ್ಯ ಭೂಷಣ, ವಿದ್ಯಾ ವಿಭೂಷಣ, ಸಿದ್ಧಾಂತ ಶಿರೋಮಣಿ, ಮೊದಲಾದ ಬಿರುದುಗಳಲ್ಲದೆ, ಸಂಸ್ಕೃತ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ ವಿಭಾಗದ ನಿರ್ದೇಶಕರಾಗಿದ್ದ ಭೋಗನಹಳ್ಳಿಯ ಬಿ.ಎಸ್. ಸಣ್ಣಯ್ಯನವರು ಗ್ರಂಥ ಸಂಪಾದನೆಯನ್ನು ಕುರಿತು ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ನೇಮಿನಾಥ ಪುರಾಣಂ, ವರ್ಧಮಾನ ಪುರಾಣಂ ಹರಿವಂಶಾಭ್ಯುದಯ, ಕಾವ್ಯಾವಲೋಕನಂ, ಜೈಮಿನಿ ಭಾರತ, ಗದಾಯುದ್ಧ, ರಾಜಾವಳಿ ಕಥೆ, ಅಮೆರಿಕ ಪ್ರವಾಸ ಕಥನ, ಮೋಹನ ತರಂಗಿಣಿ ಸಂಗ್ರಹ, ಸೊಬಗಿನ ಸೋನೆ ಸಂಗ್ರಹ, ದ್ರೋಣಪರ್ವ ಸಂಗ್ರಹ, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಗ್ರಂಥ ಸಂರಕ್ಷಣೆ ಮುಂತಾದ ಅನೇಕ ಕೃತಿಗಳನ್ನು ಬರೆದಿದ್ದಾರೆ. ಇವರ 'ನೇಮಿನಾಥ ಪುರಾಣ', 'ಗದಾಯುದ್ಧಂ'ಗಳಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ನಾಗವರ್ಮನ ವರ್ಧಮಾನ ಪುರಾಣಕ್ಕೆ ನಂಜರಾಜ ಬಹದ್ದೂರ್ ಮತ್ತು ತೀನಂಶ್ರೀ ಬಹುಮಾನಗಳೂ ಸಂದಿವೆ. ಪಿ.ಎಸ್. ಶೇಷಗಿರಿರಾಯರು ತಾಲೂಕಿನ

ಶಾಸ್ತ್ರಸಾಹಿತ್ಯ ವಿದ್ವಾಂಸರು ಹಾಗೂ ಬಹುಭಾಷಾ ವಿದ್ವಾಂಸರು, ಸಂಶೋಧಕರು ಹಾಗೊ ಪ್ರಾಚೀನ ಲಿಪಿತಜ್ಞರು ಆಗಿದ್ದಾರೆ. ಶ್ರೀಮಧ್ವ ಸಿದ್ಧಾಂತದ ಪ್ರಾವೀಣ್ಯತೆ ಪಡೆದು ವೇದಶಾಸ್ತ್ರ ಪುರಾಣಗಳ ಬಗ್ಗೆ ಅದರಲ್ಲೂ ಋಗ್ವೇದ ಮತ್ತು ಭಾಗವತಗಳ ಬಗ್ಗೆ ಐದುಸಾವಿರ ಪುಟಗಳಷ್ಟು ವ್ಯಾಖ್ಯಾನ ವಿಮರ್ಶೆಗಳನ್ನೊಳಗೊಂಡ ಲೇಖನಗಳನ್ನು ಪ್ರಕಟಿಸಿದ್ದಾರೆ. ಮಹಾಭಾರತದ ಓಲೆಗರಿ ಲಿಪಿಯನ್ನು ಕೂಲಂಕಷವಾಗಿ ಸಂಶೋಧಿಸಿ, ಪ್ರಾಚೀನ ಮಲೆಯಾಳಂ ಲಿಪಿ ಎಂದು ಸಾಧಿಸಿ ವ್ಯಾಖ್ಯಾನದೊಡನೆ ಅದನ್ನು ಪ್ರಕಟಿಸಿದ್ದಾರೆ. ಜನಪದ ತಜ್ಞ ಮತ್ತು ಜನಪದಗೀತ ಗಾಯಕರೂ ಆದ ಪಿ.ಕೆ. ರಾಜಶೇಖರ 'ಮಲೆಯ ಮಾದೇಶ್ವರ' ಎಂಬ ಬೃಹತ್ ಗ್ರಂಥ ಪ್ರಕಟಿಸಿದ್ದಾರೆ. 'ಪಿರಿಯಾಪಟ್ಟಣ ಕಾಳಗ', 'ಕರಪಾಲ ಬಸವಪುರಾಣ', 'ಬೆಟ್ಟದ ಚಾಮುಂಡಿ', 'ಜನಪದ ರಾಮಾಯಣ', 'ಚಾಮುಂಡಿ ಸಿರಿ ಚಾಮುಂಡಿ', 'ಮಾಗಡಿ ಕೆಂಪೇಗೌಡ', 'ಮಾತಿನರಗಿಣಿ' ಮುಂತಾದ ೫೦ಕ್ಕೂ ಅಧಿಕ ಪುಸ್ತಕಗಳನ್ನು ನೀಡಿದ್ದಾರೆ. 'ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', ನಾಲ್ಕು ಬಾರಿ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ' ಹಾಗೂ 'ಜಾನಪದ ತಜ್ಞ' ಪ್ರಶಸ್ತಿ ಹಾಗೂ ೨೦೦೫ರ ಸುವರ್ಣ ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ ಇವರಿಗೆ ಸಂದಿವೆ. ಕಂಪಲಾಪುರದ ಡಾ. ಕೆ.ವಿ. ನಾರಾಯಣ ಅವರು ವಿದ್ವಾಂಸರು, ಇವರ 'ಧ್ವನ್ಯಾಲೋಕ'ವು ಕಾವ್ಯ ಮೀಮಾಂಸಾ ಕ್ಷೇತ್ರದಲ್ಲಿ ಬಹು ದೊಡ್ಡ ಹೆಸರನ್ನು ಪಡೆದುಕೊಂಡಿರುವ ಪ್ರಮುಖ ಕೃತಿ.

ಬೂವನಹಳ್ಳಿಯವರಾದ ಡಿ. ಶ್ರೀಪತಿ ಜೋಯಿಸರು ಜೈನ ಹಾಗೂ ಆಗಮಿಕ ಶಾಸ್ತ್ರದ ವಿದ್ವಾಂಸರು. ಇವರು, 'ಷೋಡಷಕ್ರಿಯಾದರ್ಪಣ' ಎಂಬ ಕೃತಿಯನ್ನು ರಚಿಸಿದ್ದಾರೆ. 'ರತ್ನಾಕರನ ಕೀರ್ತನೆ'ಗಳ ಓಲೆ ಗರಿಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿದ್ದಾರೆ. 'ಬೆಳ್ಳಿ ಮೂಡಿತು ಕೋಳಿ ಕೂಗಿತು', 'ಪಂಚಾಮೃತ ಅಭಿಷೇಕ ಪೂಜಾವಿಧಿ', 'ಶಾರದಾ ಸ್ತೋತ್ರ ಕಲ್ಪಂ' 'ಜೈನ ಸ್ಮೃತಿ ಸಂಗ್ರಹ', ಮೊದಲಾದ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಎಸ್.ಟಿ. ದಕ್ಷಿಣಾಮೂರ್ತಿಯವರು ತಜ್ಞರು ಹಾಗೂ ಜನಪ್ರಿಯ ಬರಹಗಾರರಾಗಿದ್ದಾರೆ. ಪಿ.ಎನ್. ನರಸಿಂಹಮೂರ್ತಿ ಅವರ Jainism on the Kanara Coast ಎಂಬ ಮಹಾ ಪ್ರಬಂಧಕ್ಕೆ ೧೯೮೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿ ನೀಡಿದೆ. ಇವರ ೨೫೦ಕ್ಕೂ ಹೆಚ್ಚು ಸಂಶೋಧನಾ ಲೇಖನಗಳು (ಕನ್ನಡ ಹಾಗೂ ಇಂಗ್ಲಿಷ್) ನಾಡಿನ ಪ್ರಸಿದ್ಧ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಅಲ್ಲದೆ ಕರಾವಳಿ ಪ್ರದೇಶದಲ್ಲಿ ೨೫೦ಕ್ಕೂ ಹೆಚ್ಚು ಶಾಸನಗಳನ್ನು ಶೋಧಿಸಿದ್ದಾರೆ. 'ದಕ್ಷಿಣ ಕನ್ನಡದ ದೇವಾಲಯಗಳು', ಕಾರ್ಕಳ–ಒಂದು ಪ್ರಾದೇಶಿಕ ಅಧ್ಯಯನ', 'ಹಟ್ಟಿಯಂಗಡಿ ಒಂದು ಐತಿಹಾಸಿಕ ಅವಲೋಕನ' 'ಕುಂದೇಶ್ವರ – ಒಂದು ಅಧ್ಯಯನ', 'ಕುಂದಾವರದ ಕಾರ್ತಿಕೇಯ' ಎಂಬ ಮೌಲಿಕ ಗ್ರಂಥಗಳನ್ನು ರಚಿಸಿದ್ದಾರೆ. ಪಿ.ಎನ್. ನರಸಿಂಹಮೂರ್ತಿಯವರು ತಾಲ್ಲೂಕಿನ ಇತಿಹಾಸತಜ್ಞ, ಅವರ ಸೇವೆಯನ್ನು ಗುರುತಿಸಿರುವ ಜನತೆ ಕಾರ್ಕಳ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಎನ್. ಹವಳಯ್ಯ ಅವರ 'ಬಾದಾಮಿ ಚಾಲುಕ್ಯರ ಕಾಲದ ಸಾಮಾಜಿಕ ಮತ್ತು

ಆರ್ಥಿಕ ಜೀವನ' ಕುರಿತು ಸಂಶೋಧನೆಗೆ ಡಾಕ್ಟರೇಟ್ ಪದವಿ ದೊರೆತಿದೆ. 'ಎಸ್ಕವೇಷನ್ಸ್ ಅಟ್ ಬನವಾಸಿ' ಗ್ರಂಥದ ಸಹಸಂಪಾದಕರಾದ ಇವರು ಪಿರಿಯಾಪಟ್ಟಣ ತಾಲೂಕಿನಲ್ಲಿ ೧೦ಕ್ಕೂ ಹೆಚ್ಚು ಶಾಸನಗಳನ್ನೂ ಪತ್ತೆ ಹಚ್ಚಿದ್ದಾರೆ.

ಜೋಗನಹಳ್ಳಿ ಗುರುಮೂರ್ತಿ ಅವರು 'ಶೋಧ' ಕಾದಂಬರಿ ಹಾಗೂ ಕವನ ಸಂಕಲನ 'ಯತ್ನ' ಗಳನ್ನು ಪ್ರಕಟಿಸಿದ್ದಾರೆ. ಅಂಬಲಾರೆ ಬಸವೇಗೌಡ ಅವರು 'ವಸಂತ ಪೂರ್ಣಿಮ', 'ಕಣ್ಣೀರ ಕಡಲಲ್ಲಿ' ಕಾದಂಬರಿಗಳು ಹಾಗೂ 'ಎಲ್ಲಿಡಲಿ ಕಾಲು?' ಕಥಾಸಂಕಲವನ್ನು ಪ್ರಕಟಿಸಿದ್ದಾರೆ. ಕೆ.ಜೆ. ಸುರೇಶ ರಾಜ್ಯಶಾಸ್ತ್ರದ ಹಲವಾರು ಪಠ್ಯಪುಸ್ತಕಗಳನ್ನು ರಚಿಸಿದ್ದಾರೆ. 'ಮಂಡ್ಯ ಜಿಲ್ಲಾ ರೈತ ಚಳವಳಿ – ಒಂದು ಅಧ್ಯಯನ' ಇವರ ಮಹಾ ಪ್ರಬಂಧ. ಮೈಸೂರು ಮಿತ್ರ ಪತ್ರಿಕೆಯ ಸಹ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ದೊಡ್ಡ ಕಮರಹಳ್ಳಿಯ ಪ್ರೊ. ಎಚ್.ಸಿ. ಲೋಹಿತಾಶ್ವ ಅವರು ಟಿಬೆಟಿಯನ್ನರನ್ನು ಕುರಿತ 'ಪ್ರಪಂಚದ ಮೇಲ್ಭಾವಣಿ' ಹಾಗೂ 'ರಾಜಕೀಯ ಸಿದ್ಧಾಂತ ಮತ್ತು ಚಿಂತಕರು' 'ಅಂತರರಾಷ್ಟ್ರೀಯ ಸಂಬಂಧಗಳು ಮತ್ತು ಸಂಘಟನೆಗಳು', 'ಆಧುನಿಕ ಸರ್ಕಾರ' ಮುಂತಾದ ಗ್ರಂಥಗಳನ್ನು ಬರೆದಿದ್ದಾರೆ. ಕಂಪಲಾಪುರದ ಕೃಷ್ಣಶೆಟ್ಟರು ೭೦ರ ದಶಕದಲ್ಲಿ ನಾಟಕ ಕ್ಷೇತ್ರಕ್ಕಾಗಿ ಕೃಷಿಗೈದವರು, 'ನುಡಿದಂತೆ ನಡಿ' ಮತ್ತು 'ಶ್ರೀ ಶೈಲಯಾತ್ರೆ' ಎಂಬ ನಾಟಕಗಳನ್ನು ರಚಿಸಿದ್ದಾರೆ. ಕಂಪಾಲಪುರ ಗೋಪಾಲ ಅವರು 'ಸಮಾಜ ಸೇವಾರತ್ನ' ಜೀವನಚರಿತ್ರೆ, ಕೆ.ಎಂ. ಶಿವಶಂಕರ್ ಅವರ ಅಭಿನಂದನಾ ಗ್ರಂಥ 'ಶಿವಸಂಪದ', ಪ್ರೊ. ಕೆ.ಬಿ. ಶಿವರುದ್ರಪ್ಪನವರ ಸಂಸ್ಮರಣ ಗ್ರಂಥ 'ಮಣ್ಣಿನ ಹಣತೆ' ಗ್ರಂಥಗಳ ಸಹಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ. ಡಿ. ಸತೀಶ್ ಕಿತ್ತೂರು ಅವರ ಅನೇಕ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು, ಅವರು 'ಪದಸಂಪದ' ಎಂಬ ಕೃತಿಯ ಸಹಲೇಖಕ ಹಾಗೂ 'ಮಣ್ಣಿನ ಹಣತೆ' ಗ್ರಂಥದ ಸಹಸಂಪಾದಕರಾಗಿದ್ದಾರೆ. ಬೆ.ಗೋ. ರಮೇಶ್ ಅವರು ಬೆಟ್ಟದಪುರದವರು. ಅವರು ಜನಪ್ರಿಯ ಪುಸ್ತಕ ಮಾಲೆಯಲ್ಲಿ ೫೦೦ ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ರಾಷ್ಟ್ರೋತ್ಥಾನ ಪರಿಷತ್ ಕೊಡಮಾಡುವ "ಭಾರತ–ಭಾರತಿ ಪುಸ್ತಕಮಾಲೆ ಲೇಖಕರ ಸನ್ಮಾನ" ಅವರಿಗೆ ಸಂದಿದೆ.

ಬಿ.ವಿ. ಜವರೇಗೌಡ, ಚಿಕ್ಕಮಳಲಿ ಆರ್. ಮಹದೇವ, ಡಿ. ಸತೀಶ್ಚಂದ್ರ, ಕಂಪ್ಲಾಪುರ ಮೋಹನ್, ಎನ್.ಬಿ. ಕೃಷ್ಣಪ್ಪ , ಡಾ. ವಸಂತ ತಿಮಕಾರಾಪುರ, ಬೆಟ್ಟದಪುರದ ಗೊರಳ್ಳಿ ಜಗದೀಶ್, ಹಂಡಿತವಳ್ಳಿ ಎಸ್. ದಿವಾಕರ, ಕೋಗಿಲವಾಡಿ ಬಿ. ರಾಜು, ಸಿ. ಲವನಾಯಕ್, ಅತ್ತಿಗೋಡಿನ ಎ.ಟಿ. ದಶರಥ, ಪಿರಿಯಾಪಟ್ಟಣದ ಎಸ್.ಟಿ. ದಕ್ಷಿಣಾಮೂರ್ತಿ, ಡಿ. ಸತೀಶಚಂದ್ರ, ಹಬಟೂರಿನ ಹೇಮಲತಾಮಣಿ, ಕಂದೇಗಾಲದ ಮೇನಕಾಶೇಖರ್, ಬೆಟ್ಟದಪುರದ ಮೋಹನಕುಮಾರಿ ಪಿರಿಯಾಪಟ್ಟಣದ ಸುಚಿತ್ರಾಜನಾರ್ದನ್, ಮೆಲ್ಲಹಳ್ಳಿಯ ವಿಶ್ವಪ್ರಕಾಶ್ ಮಹಡಿ ಮನೆ, ಕಂಪಲಾಪುರದ ಡಿ. ರಾಜಣ್ಣ, ಕೆ.ವಿ. ಜಯರಾಂ, ಕೆ.ವಿ. ವೆಂಕಟೇಶ್, ಸರಸ್ವತಿಮೋಹನ್, ಕಗ್ಗುಂಡಿ ಪುಟ್ಟರಾಜು ಹಾಗೂ ಜಹೂರ್ಆಲಿ ಇವರೆಲ್ಲ ತಾಲೂಕಿನ ಗಮನಾರ್ಹ ಲೇಖಕರಾಗಿದ್ದಾರೆ.

ಬೂತನಹಳ್ಳಿ ಶ್ರೀ ಕಾಳೇಗೌಡ ಅವರಿಗೆ ಸಣ್ಣ ಕೈಗಾರಿಕಾ ಕ್ಷೇತ್ರದ ಮಹತ್ಸಾಧನೆಗೆ ಆಲ್ ಇಂಡಿಯಾ ಅಚೀವರ್ಸ್ ಕಾನ್‌ಫೆರೆನ್ಸ್ ಅವರು 'ಜೆಮ್ ಆಫ್ ಇಂಡಿಯಾ' ಪ್ರಶಸ್ತಿ ನೀಡಿ ಸನ್ಮಾನಿಸಿದೆ.

ತಾಲೂಕಿನ ವೀರಯೋಧ ಕುಯ್ಯಮುಡಿ ಪೊನ್ನಪ್ಪ ಬೆಳ್ಳಿಯಪ್ಪ ದಿನಾಂಕ ೦೪ ಆಗಸ್ಟ್ ೨೦೦೨ ರಂದು ಅರುಣಾಚಲ ಪ್ರದೇಶದ ತೇಂಗಾ ಗ್ರಾಮದಲ್ಲಿ ಹಿಮಕ್ಕೆ ಸಿಕ್ಕಿ ತೊಂದರೆ ಪಡುತ್ತಿದ್ದ ಜನರನ್ನು ರಕ್ಷಿಸಲು ಹೋಗಿ ತಾವೇ ಹಿಮಪಾತಕ್ಕೆ ಸಿಲುಕಿ ಪ್ರಾಣ ನೀಗಿದವರು. ಒಂಬತ್ತು ವರ್ಷಗಳ ಎಲ್.ಎಸ್.ಎಂ. ಸೈನ್ಯ ಸೇವಾಪದಕ, ಸುರಕ್ಷಾಸರಣಿಯ ವಿಶೇಷ ಸೇವಾ ಪದಕ, ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಪದಕ, ಇಪ್ಪತ್ತು ವರ್ಷಗಳ ಎಸ್‌ಎಸ್ ಎಂ ಹೈ ಆಲ್ಟಿಟ್ಯೂಡ್ ಮೆಡಲ್ ಮುಂತಾದವುಗಳನ್ನು ಗಳಿಸಿ ತಾಲ್ಲೂಕಿನ ಹಿರಿಮೆಗೆ ಕಾರಣರಾಗಿದ್ದಾರೆ.

ಹಬಟೂರಿನ ಮಹದೇವಮ್ಮ ಎಂಬ ಜನಪದ ಗಾಯಕಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ಸಿಕ್ಕಿರುತ್ತದೆ.

ಬೆಟ್ಟದ ತುಂಗದ ಸಾಕಮ್ಮ ಎಂಬವರು ಜನಪದ ವೈದ್ಯೆ ಜೊತೆಗೆ ಜನಪದ ಗಾಯಕಿ. ಈಕೆಯ ವೈದ್ಯಕೀಯ ಸೇವೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ದೊರೆತಿದೆ.

ತಾಲ್ಲೂಕಿನ ಪ್ರಖ್ಯಾತ ಸಂಗೀತ ವಿದ್ವಾಂಸರಾದ ಪಿ.ಆರ್. ನಾರಾಯಣಮೂರ್ತಿ ಅವರಿಗೆ ಗಾನಸುಧಾನಿಧಿ ಎಂಬ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಛಾಯಾಗ್ರಹಣ ಕ್ಷೇತ್ರದಲ್ಲಿ ಅಸೀಮ ಸಾಧನೆಯನ್ನು ಮಾಡಿರುವ ರಾವಂದೂರಿನ ಅಲ್ಲಮ್ಮಪ್ರಭು ಅವರಿಗೆ ಅಂತರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.

ಪತ್ರಕರ್ತರಾಗಿ ಪ್ರಸಿದ್ಧರಾಗಿರುವ ರಾವಂದೂರು ಆರ್.ಪಿ. ಜಗದೀಶ್ ಅವರಿಗೆ ಪತ್ರಿಕಾ ಅಕಾಡೆಮಿ ಪ್ರಶಸ್ತಿ ಹಾಗೂ ಕರ್ನಾಟಕ ರಾಜ್ಯ ಪ್ರಶಸ್ತಿ ಲಭಿಸಿದೆ.

ಹಿಟ್ಟಿನ ಹೆಬ್ಬಾಗಿಲಿನಲ್ಲಿರುವ ವಿನಾಯಕ ಯುವಕ ಸಂಘ ಮತ್ತು ದೊಡ್ಡಮ್ಮ ತಾಯಿ ಯುವತಿ ಮಂಡಳಿಗಳು ಜಿಲ್ಲೆ ಮತ್ತು ರಾಜ್ಯಮಟ್ಟದ ಕಲಾಸ್ಪರ್ಧೆಗಳಲ್ಲಿ ಭಾಗವಹಿಸಿ ಸಮಗ್ರ ಪ್ರಶಸ್ತಿಯನ್ನು ಗಳಿಸಿವೆ.

**ಜಾನಪದ**

ಪಿರಿಯಾಪಟ್ಟಣ ತಾಲೂಕಿನಲ್ಲಿ ಸಂಪದ್ಭರಿತ ಜಾನಪದವನ್ನು ಕಾಣಬಹುದಾಗಿದೆ. ವಿಪುಲ ಜಾನಪದ ಸಾಮಗ್ರಿಯನ್ನೊದಗಿಸುವ ಜೇನುಕುರುಬರು, ಸೋಲಿಗರು, ಕಾಡುಕುರುಬರು, ಎರವರು ಹೀಗೆ ಅನೇಕ ಬುಡಕಟ್ಟು ಜನಾಂಗಗಳಿವೆ. ಜನಪದ ಧರ್ಮವನ್ನು ಅವಲಂಬಿಸಿಕೊಂಡು ಬಂದಿರುವ ಈ ಸುತ್ತಿನ ಜನರು ದೊಡ್ಡಮ್ಮ,

ಚಿಕ್ಕಮ್ಮ, ಮಾರಮ್ಮ, ಕಿತ್ತೂರಮ್ಮ, ಪಿರಿಯಾಪಟ್ಟಣದಮ್ಮ ಮುಂತಾದ ಜನಪದ ದೇವತೆಗಳ ಹಬ್ಬ, ಜಾತ್ರೆ, ಉತ್ಸವ, ತೆಪ್ಪ ತಿರುನಾಳುಗಳನ್ನು ಆಚರಿಸಿಕೊಂಡು ಬಂದಿದ್ದಾರೆ. ಜಾನಪದದ ಎಲ್ಲಾ ಪ್ರಕಾರಗಳನ್ನು ಈ ನೆಲದಲ್ಲಿ ಕಾಣಬಹುದಾಗಿದ್ದು, ಅವುಗಳಲ್ಲಿ ಕೆಲವು ಪ್ರಕಾರಗಳನ್ನು ಮುಂದೆ ಪರಿಚಯ ಮಾಡಿಕೊಡಲಾಗಿದೆ.

**ತಮಟೆಕುಣಿತ :** ತಮಟೆ ಕುಣಿತ ಮತ್ತು ರಂಗ ಕುಣಿತಗಳು ಜನಪದರ ಬದುಕಿನ ಅವಿಭಾಜ್ಯ ಅಂಗಗಳಂತಿವೆ. ದಿನವಿಡೀ ಕಾಯಕದ ನಡುವೆ ಆಯಾಸ, ಬೇಸರಗಳನ್ನು ದೂರ ಮಾಡಿಕೊಳ್ಳಲು ಜನಪದರು ಬೆಳೆಸಿಕೊಂಡ ಕಲೆಗಳಲ್ಲಿ ಇವುಗಳು ವಿಶಿಷ್ಟವಾದವು. ಬೆಕ್ಕರೆಯ ಲೋಲೇಗೌಡ ಮತ್ತು ತಂಡ, ಕೆ.ಟಿ. ರಾಮೇಗೌಡ ಮತ್ತು ತಂಡ ಇವು ಪ್ರಮುಖ ತಮಟೆ ಕುಣಿತ ತಂಡಗಳು.

**ರಂಗದ ಕುಣಿತ :** ಕಿರುನೆಲ್ಲಿಯ ಬಸವೇಶ್ವರ ಉತ್ಸವದ ದಿನ ಮತ್ತು ದೊಡ್ಡಮ್ಮನ ರಥೋತ್ಸವ ದಿನ ರಂಗದ ಕುಣಿತ ನಡೆಯುತ್ತದೆ. ಊರ ಜನರಲ್ಲಿ ಪರಸ್ಪರ ಸಾಮರಸ್ಯ ತುಂಬುತ್ತಿರುವ ರಂಗದ ಕುಣಿತದಲ್ಲಿ ಎಲ್ಲಾ ಬಗೆಯ ಜನರು ಒಟ್ಟಿಗೆ ಕೂಡಿ ಮೈಬೆವರು ಸುರಿಯುವಂತೆ, ಗಂಟೆಗಟ್ಟಲೆ ನಿರಂತರವಾಗಿ ಕುಣಿದು ತಣಿಯುತ್ತಾರೆ. ರಾವಂದೂರಿನಲ್ಲಿ ಹಬ್ಬಹರಿದಿನಗಳ ಸಮಯದಲ್ಲಿ ವಿಶೇಷವಾಗಿ ಅಗಸ ಜನಾಂಗದವರು ರಂಗದ ಕುಣಿತದಲ್ಲಿ ತೊಡಗುತ್ತಾರೆ,

**ಜನಪದಕಥೆಗಳು :** ಈ ತಾಲೂಕು 'ಜಾನಪದದ ಉಗ್ರಾಣ' – ಇಲ್ಲಿ ಕತೆ, ಗೀತೆ, ಲಾವಣಿ, ಕಾವ್ಯ ಹಾಡುವವರು ಇರುವಂತೆ ಅದನ್ನು ಸಂಗ್ರಹಿಸಿ ಪ್ರಕಟಿಸುವ ವಿದ್ವಾಂಸರೂ ಇದ್ದಾರೆ. ತಾಲೂಕಿನ ಜಾನಪದ ಕತೆಗಾರ್ತಿ ಶರಣೆ ನಿಂಗಮ್ಮ, ಜನಪದ ಕತೆಗಳ ದಂತ ಕಥೆಯೆಂದೇ ಪ್ರಸಿದ್ಧರು. ವಿಶಿಷ್ಟ ರೀತಿಯಲ್ಲಿ ಕಥೆಗಳನ್ನು ನಿರೂಪಿಸುತ್ತಾರೆ. ಇವರ ಜ್ಞಾನ ಭಂಡಾರದಿಂದ ಸಂಗ್ರಹಿಸಿದ 'ಮಾತಿನರಗಿಣಿ' ಕಥಾಸಂಕಲನವನ್ನು ಪ್ರಕಟಿಸಲಾಗಿದ್ದು ಇದಕ್ಕೆ ೧೯೯೯ ನೇ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬಹುಮಾನ ಸಂದಿದೆ. ವೆಂಕಟೇಗೌಡನ ಕೊಪ್ಪಲಿನ ಪುಟ್ಟಮ್ಮ, ಹರಿಲಾಪುರದ ಅಪ್ಪಾಜಿಗೌಡ, ಮುತ್ತೂರು ಕಾಲೋನಿ (ರಾಜೀವ ಗ್ರಾಮ) ಸಣ್ಣಮ್ಮ, ಮುತ್ತೂರಿನ ಎಂ.ಎಸ್. ಲೋಕೇಶ, ಚೌತಿಯ ಸಣ್ಣಕ್ಕ, ಸತ್ಯಗಾಲದ ಎಂ. ನಂಜುಂಡಯ್ಯ, ಜವನೀಕುಪ್ಪೆಯ ವಿ. ತಿಮ್ಮೇಗೌಡ, ಬಾವಲಾಳುಗ್ರಾಮದ ರುಕ್ಕಮ್ಮಣ್ಣಿ, ಮರದೂರಿನ ಬಸಪ್ಪ, ಮಹಾಂತಯ್ಯ, ತಾತನಹಳ್ಳಿಯ ತೋಪಯ್ಯ, ಕಂದನಹಳ್ಳಿಯ ಸಣ್ಣಕ್ಕ ಇವರೆಲ್ಲರೂ ತಾಲೂಕಿನ ಕಥೆಗಾರರು.

**ಕೋಲಾಟ :** ಜನಪದ ಕಲೆಗಳಲ್ಲಿ ಕೋಲಾಟ ಪ್ರಮುಖವಾದದ್ದು. ಸೀಗಡಿಕಟ್ಟೆಯ ಶಿವಣ್ಣ ಮತ್ತು ತಂಡ, ನೀಲಂಗಾಲದ ಬಿಳೀಗೌಡರ ತಂಡ, ಹಿಟ್ನೆ ಹೆಬ್ಬಾಗಿಲಿನ ವಿನಾಯಕ ಯುವಕ ಸಂಘ, ಶ್ಯಾನುಭೋಗನ ಹಳ್ಳಿಯ ಮಂಜುನಾಥ್‌ತಂಡ, ಪೂನಾಡಹಳ್ಳಿಯ ಕಲಾವಿದರು, ಹೊನ್ನಾಪುರದ ಪುಟ್ಟೇಗೌಡರ ತಂಡ. ಬೋರಪ್ಪನ

ಮಗ ಎಚ್.ಬಿ. ರಾಜು, ಕಾಳಪ್ಪನ ಮಗ ಎಚ್.ಕೆ. ರಾಜು, ವಡ್ಡರ ಹಳ್ಳಿಯ ಕಾಳೇಗೌಡ, ಹೊನ್ನೇಗೌಡರ ತಂಡ, ಜೋಗನಹಳ್ಳಿಯ ಮೂಡ್ಲಯ್ಯನ ಮಗ ತಮ್ಮಯ್ಯನ ತಂಡ, ಕಂಪಲಾಪುರದ ಬಸವೇಗೌಡರ ತಂಡ, ಮಾಕೋಡುಶೆಟ್ಟಿಹಳ್ಳಿಯ ಶಿವಣ್ಣನಾಯಕ ಮತ್ತು ಚಿಕ್ಕವೀರ ನಾಯಕ, ಕಿರುನೆಲ್ಲಿಯ ಕಾಳ ಮತ್ತು ತಂಡ, ರಾವಂದೂರು ದೊಡ್ಡ ಕೊಪ್ಪಲು ಗ್ರಾಮದ ಜವರನಾಯ್ಕ ಮತ್ತು ತಂಡ, ಹಂಡಿತವಳ್ಳಿಯ ಎಚ್.ಆರ್. ರಾಜಣ್ಣನವರ ತಂಡ, ಸುಂಡವಾಳಿನ ಸ್ವಾಮಿ, ಗಂಗಯ್ಯನ ಮಾದೇವ, ಕುಂಟಣ್ಣ, ಮಾಕನಹಳ್ಳಿ ಪಾಳ್ಯದ ಮಾದೇವ ಮತ್ತು ತಂಡ, ರಾವಂದೂರಹೊಸಳ್ಳಿಯ ಅಣ್ಣಯ್ಯ, ಕುಳ್ಳಯ್ಯ, ಬೆಟ್ಟಯ್ಯ, ತಮ್ಮಡಿಹಳ್ಳಿಯಲ್ಲಿ ಕೊಂತಿ ಹಬ್ಬದ ಸಂದರ್ಭದಲ್ಲಿ ಕೂಡಿ ಆಡುವ ಕಾಳೇಗೌಡ, ಸುಬ್ಬೇಗೌಡರ ತಂಡ, ಅತ್ತಿಗೋಡಿನ ಜವರಶೆಟ್ಟಿಯ ಮಗ ಶಿವಪ್ಪ ಮತ್ತು ತಂಡ, ನೆಲ್ಲೂರಿನ ಕೋಲಾಟದ ತಂಡ ಇವರೆಲ್ಲರೂ ತಾಲೂಕಿನ ಪ್ರಮುಖ ಕೋಲಾಟ ಕಲಾವಿದರು.

**ಜೋಗಿಹಾಡು :** ತಾಲೂಕಿನ ಕಲಾವಿದರಾದ ನೀಲಂಗಾಲದ ತಮ್ಮೇಗೌಡರ ಹೆಂಡತಿ ಮಾಕಮ್ಮ, ಜೊತೆಗೆ ಗೌರಮ್ಮ, ಸಾವಿತ್ರಮ್ಮ, ಸುರಗಹಳ್ಳಿಯ ನರಸಮ್ಮ, ಸೀಗಡಿಕಟ್ಟೆಯ ಜವರಪ್ಪ, ಸಂಗರಶೆಟ್ಟಿಹಳ್ಳಿಯ ಮಡಿವಾಳ ದಾಸಯ್ಯ, ಪೂನಾಡಹಳ್ಳಿ ಮಾರಿಗುಡಿ ಜವರೇಗೌಡರೂ ಪಿರಿಯಾಪಟ್ಟಣದ ಸಣ್ಣಯ್ಯನವರ ಬೀದಿಯ ಕೆಂಪೇಗೌಡರ ಅಳಿಯ ಜವನೀಕುಪ್ಪೆ ಕುಳ್ಳೇಗೌಡ ಇವರೆಲ್ಲರೂ ಜೋಗಿಹಾಡು ಹಾಡುವುದರಲ್ಲಿ ಪ್ರಮುಖರು.

**ಭಜನೆ :** ಜನಪದ ಕಲೆಗಳಲ್ಲಿ ಭಜನೆಯೂ ಜನಪ್ರಿಯ ಪ್ರಕಾರ. ಈ ಕಲೆಯನ್ನು ನೀಲಂಗಾಲದ ಶಿವಲಿಂಗಾಚಾರ್, ದೊಡ್ಡಮಲ್ಲಯ್ಯ ಪ್ರಮುಖರು. ಮಾಕೋಡಿನ ರಾಜಮ್ಮ, ದೇವಕ್ಕಮ್ಮ, ಪಾಪಣ್ಣಾಚಾರ್, ಎಂ.ಟಿ. ಕಾಡಸೇಟು, ಪುಟ್ಟಬಸಪ್ಪ, ಕೃಷ್ಣಪ್ಪ ಮೊದಲಾದವರು ಕರಗತ ಮಾಡಿಕೊಂಡಿದ್ದಾರೆ.

**ಜನಪದ ಗೀತೆ :** ಜನಪದ ಪ್ರಕಾರಗಳಲ್ಲಿ ವಿಶೇಷ ಮನ್ನಣೆ ಪಡೆದಿರುವುದು ಜನಪದಗೀತೆಗಳು. ಜನಪದರ ಬದುಕಿನ ಏರಿಳಿತ, ದುಃಖ ದುಮ್ಮಾನ, ನೋವು ನಲಿವುಗಳು, ಹಾಡುಗಳಾಗಿ ಹೊರಬಂದಿವೆ. ಮುತ್ತೂರು ಕಾಲೋನಿಯ ತಿಮ್ಮೇಗೌಡರ ಹೆಂಡತಿ ಮಾದೇವಮ್ಮ, ಸುಳಗೋಡಿನ ಅಣ್ಣೇಗೌಡರು, ಲಕ್ಷ್ಮೀಪುರದ ಸಣ್ಣಪ್ಪ, ಹಬಟೂರಿನ ಮಾದೇವಮ್ಮ ಮತ್ತು ವೃಂದ, ಮರದೂರಿನ ಸಾಕಮ್ಮ, ಜವರಮ್ಮ, ಬೆಟ್ಟದ ತುಂಗದ ಸಾಕಮ್ಮ, ಇವರು ಜನಪದ ಗೀತೆಗಳ ಗಾಯಕರು ಪಿರಿಯಾಪಟ್ಟಣದ ಕಾಳಗವನ್ನು ಮಹದೇವಮ್ಮ ತನ್ನ ಸಂಗಡಿಗರಾದ ದೊಡ್ಡಮ್ಮ, ಜವರಮ್ಮ, ಪಾರ್ವತಿಯರೊಡನೆ ಸೊಗಸಾಗಿ ಹಾಡುತ್ತಾಳೆ. ಹಬಟೂರಿನ ಮಾದೇವಮ್ಮ ಮತ್ತು ಬೆಟ್ಟದ ತುಂಗಮ್ಮ ಅವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಗಳು ಸಂದಿವೆ.

**ಸೋಬಾನೆ ಪದ :** ಮದುವೆಯ ಶುಭ ಸಂದರ್ಭಗಳಲ್ಲಿ ಹೆಂಗಸರು ಒಟ್ಟಾಗಿ ಕುಳಿತು ಹಾಡುವ ಗೀತಾ ಪ್ರಕಾರ. ಜನಪದರು ತಮ್ಮ ಕೆಲಸಗಳ ನಡುನಡುವೆ ಈ ಪದಗಳನ್ನು

ಗುನುಗುವುದುಂಟು. ಅಡಕೆ ಕತ್ತರಿಸುವಾಗ, ಹೆಣ್ಣುಮಕ್ಕಳು ಮೈನೆರೆದಾಗ ಅವರನ್ನು 'ಗುಡ್ಲು' ಕೂರಿಸುವಾಗ, ಮಗುವನ್ನು ತೊಟ್ಟಿಲಿಗೆ ಹಾಕುವ ಸಂದರ್ಭಗಳಲ್ಲಿ ಸೋಬಾನೆ ಪದಗಳನ್ನು ಹಾಡಲಾಗುತ್ತದೆ. ಚೌತಿಯ ಲಕ್ಷ್ಮಮ್ಮ ಮತ್ತು ವೃಂದ, ಜವರಿಕೊಪ್ಪಲಿನ ಕಾಳಮ್ಮ, ಕಂಪಲಾಪುರದ ಹರಿಜನ ಕೇರಿಯ ಶಿವಮ್ಮ ಮತ್ತು ತಂಡ, ತಾತನಹಳ್ಳಿಯ ಪುಟ್ಟಮ್ಮ, ನಿಲಂಗಾಲಶೆಟ್ಟಿಹಳ್ಳಿಯ ನಿಂಗಮ್ಮ ಮತ್ತು ತಂಡ, ಬೋರೆಹೊಸಳ್ಳಿಯ ಕೆಂಗಮ್ಮನವರತಂಡ, ರಾವಂದೂರು ದೊಡ್ಡಕೊಪ್ಪಲಿನ ಪುಟ್ಟಕ್ಕಯ್ಯಮ್ಮ, ಸಿಂಗಮ್ಮ, ಪೂಜಾರಿ ಜವರಮ್ಮ, ರಾವಂದೂರು ಹೊಸಳ್ಳಿಯ ದುಂಡಮ್ಮ, ಕಿತ್ತೂರು ರೆಟ್ಟೇಗೌಡನ ಕೊಪ್ಪಲಿನ ಪುಟ್ಟತಾಯಮ್ಮ ಪ್ರಮುಖ ಸೋಬಾನೆ ಹಾಡುಗಾರರು.

**ಕೊಂತಮ್ಮನ ಪದವನ್ನು** ಕಾರ್ತಿಕಮಾಸದಲ್ಲಿ ಕೊಂತಿ ದೇವಿಯ ಮಹಿಮೆಯನ್ನು ಹೊಗಳುವ ಈ ಪದಗಳನ್ನು ಕೊಂತಿ ಹಬ್ಬದ ಸಂದರ್ಭದಲ್ಲಿ ತಾಲೂಕಿನ ಕೆಲವೆಡೆ ಹಾಡುತ್ತಾರೆ. ಕಂಪಲಾಪುರದ ಕೊಂತಮ್ಮ, ಕಿರುನೆಲ್ಲಿಯ ಮಂಜುಳ, ಸುಮ, ಕೆಂಪೇಗೌಡನ ಕೊಪ್ಪಲಿನ ಪುಟ್ಟಮ್ಮ, ಸುಬ್ಬಮ್ಮ, ನಿಂಗಮ್ಮ, ಗೌರಮ್ಮ ಅವರು ಕೊಂತಿಪದಗಳನ್ನು ಹಾಡುತ್ತಾರೆ.

**ಮಲ್ಲಿಕಾರ್ಜುನನ ಹಾಡು :** ಬೆಟ್ಟದಪುರದ ಶಿಡ್ಲು ಮಲ್ಲಿಕಾರ್ಜುನಸ್ವಾಮಿಯ ಮಹಿಮೆಯನ್ನು ಕುರಿತು ನಿಲಂಗಾಲಶೆಟ್ಟಹಳ್ಳಿಯ ರಾಜೇಗೌಡರು ಹಾಡುತ್ತಾರೆ. ತಾಲೂಕಿನಾದ್ಯಂತ ಮಲ್ಲಯ್ಯನ ಹಾಡುಗಳನ್ನು ಹಾಡುವ ಕಲಾವಿದರಿದ್ದಾರೆ. ಈ ಸುತ್ತಿನ ದೊಂಬಿ(ದುಂಬಿ) ದಾಸರು ಇವುಗಳ ಆದ್ಯ ಪ್ರವರ್ತಕರು.

ಅರೇನಹಳ್ಳಿಯ ಮುರ್ಷದ್ ಎಂಬ ಫಕೀರರು ತಮ್ಮ ತಂಡದೊಡನೆ ಪ್ರದರ್ಶಿಸುವ ಫಕೀರರ ಕುಣಿತ ವಿಶೇಷ ಬಗೆಯದು. ಅಲ್ಲದೆ ಖವ್ವಾಲಿಗಳನ್ನು ಕೂಡ ಇವರು ಸುಮಧುರವಾಗಿ ಹಾಡಿ ರಂಜಿಸುತ್ತಾರೆ.

ಯಕ್ಷಗಾನ ಕಲೆಯು ಪಿರಿಯಾಪಟ್ಟಣ ತಾಲೂಕಿನ ರಾಜನ ಬಿಳಗುಲಿ ಗ್ರಾಮದಲ್ಲಿ ಕಂಡುಬರುತ್ತದೆ. ಇಲ್ಲಿನ ಯಕ್ಷಗಾನ ತಂಡ 'ಗಜ ಗೌರಿವ್ರತ' ಪ್ರಸಂಗವನ್ನು ಅಭಿನಯಿಸುವುದರಲ್ಲಿ ಪ್ರಸಿದ್ಧಿ ಪಡೆದಿದೆ. ಪುಟ್ಟಣ್ಣ ಕಣಗಾಲ್ ಮತ್ತು ಪ್ರಭಾಕರ ಶಾಸ್ತ್ರಿ ಅವರು ಈ ಪ್ರಸಂಗವನ್ನು ನೋಡಿ, ಅವರ ಪ್ರೋತ್ಸಾಹದಿಂದಾಗಿ ಈ ಪ್ರಸಂಗವು ಮೈಸೂರು ಆಕಾಶವಾಣಿ ಕೇಂದ್ರದಿಂದ ಪ್ರಸಾರವಾಗಿದ್ದಿತು. ರಾಜನ ಬಿಳುಗುಲಿಯ ಯಕ್ಷಗಾನ ತಂಡಕ್ಕೆ ಹನುಮಂತಶೆಟ್ಟರು ಭಾಗವತರಾಗಿದ್ದು, ತಿಮ್ಮೇಗೌಡ, ಕಲ್ಲಹಳ್ಳಿ ಸ್ವಾಮಾಚಾರ್ಯರು, ನಂಜಪ್ಪಚಾರ್ಯ, ಮಾಳಿಗೆ ತಿಮ್ಮೇಗೌಡ, ಚಂದ್ರಾಚಾರಿ, ಈಶ್ವರಾಚಾರಿ ಹಾಗೂ ಸಣ್ಣವೀರಾಚಾರಿ ಇವರು ಕಲಾವಿದರಾಗಿದ್ದಾರೆ.

**ಕೊತ್ತಿಮರಿ ಕುಣಿತವು** ಜನಪದ ನೃತ್ಯ ಪ್ರಕಾರಗಳಲ್ಲಿ ಕಂಡುಬರುವ ಅಪರೂಪದ ಮತ್ತು ವಿಚಿತ್ರವಾದ ಕುಣಿತ. ಈ ಕೊತ್ತಿಮರಿ ಕುಣಿತವನ್ನು ಬಸಲಾಪುರದಲ್ಲಿ ಹಬ್ಬಹರಿದಿನಗಳಲ್ಲಿ ಕುಣಿಯಲಾಗುತ್ತದೆ.

**ಪಿರಿಯಾಪಟ್ಟಣದ ಕಾಳಗ :** ಜನಪದ ವೀರ ಕಾವ್ಯಗಳಲ್ಲಿ ಪಿರಿಯಾಪಟ್ಟಣದ ಕಾಳಗ ಪ್ರಮುಖವಾದದ್ದು. ನೀಲಗಾರರು – ದೇವರಗುಡ್ಡರು – ಹಾಗೂ ಹೆಂಗಸರ ಹಾಡ್ಗತೆಗಳಲ್ಲಿ ಈ ವೀರಕಾವ್ಯ ಹರಿದು ಬಂದಿದೆ. ಇದನ್ನು ತಾಲೂಕಿನ ಮೇಲೂರಿನ ಅಂಧಕಲಾವಿದ, ಚೌಡಿಕೆ ಸಂಪ್ರದಾಯದ ಸುಬ್ಬಯ್ಯ, ಹಬಟೂರಿನ ಗಾಯಕಿಯರಾದ ಮಾದೇವಮ್ಮ, ದೊಡ್ಡಮ್ಮ, ಜವರಮ್ಮ, ಪಾರ್ವತಿ ಇವರೆಲ್ಲರೂ ಹಾಡುತ್ತಾರೆ. ಕಂಪಲಾಪುರದ ನೀಲಗಾರ ಸಂಪ್ರದಾಯದ ರಾಚಯ್ಯನವರು ಇದನ್ನು ವಿಶೇಷವಾಗಿ ಹಾಡುತ್ತಿದ್ದರು.

**ಸಂಗೀತ–ನೃತ್ಯ**

ಸಂಗೀತ, ಶಿಲ್ಪ, ಚಿತ್ರ–ನಾಟ್ಯ–ನಾಟಕ ಗಮಕ ಇತ್ಯಾದಿ ಲಲಿತ ಕಲೆಗಳಲ್ಲಿ ನಿಷ್ಣಾತರಾಗಿದ್ದ ಕಲಾವಿದರನ್ನು ಈ ತಾಲೂಕು ಪಡೆದಿದೆ. ಶ್ರೀರಾಮಕವಿ ಅವರು ಪಿರಿಯಾಪಟ್ಟಣದ ಕವಿ; ಸುಪ್ರಸಿದ್ಧ ವಾಗ್ಗೇಯಕಾರ ಹಾಗೂ ಸಂಗೀತ ವಿದ್ವಾಂಸರು. ದಳವಾಯಿ ದೇವರಾಜಯ್ಯನ ಆಸ್ಥಾನದಲ್ಲಿ ವಿದ್ವಾಂಸರಾಗಿದ್ದ ಇವರು ಬರೆದಿರುವ ಅನೇಕ ಕೃತಿಗಳಲ್ಲಿ "ಸಂಗೀತರಾಘವ" ಎಂಬ ಕೃತಿ ನಮಗೆ ಉಪಲಬ್ಧವಾಗಿದೆ. ಆರ್.ಆರ್. ಕೇಶವಮೂರ್ತಿ ಅವರು ಕಛೇರಿಗಳಿಂದ ಜನಮನ್ನಣೆ, ರಾಜ್ಯಮನ್ನಣೆ ಗಳಿಸಿದ ಖ್ಯಾತ ವಿದ್ವಾಂಸರು. ಚೌಡಯ್ಯನವರಂತೆಯೇ ಇವರೂ ಏಳುತಂತಿ ಪಿಟೀಲುವಾದನ ನಿಪುಣರೆನ್ನಿಸಿಕೊಂಡವರಾಗಿದ್ದಾರೆ. ರುದ್ರಪಟ್ಟಣದಲ್ಲಿ ಜನ್ಮತಾಳಿದ್ದರೂ ತಮ್ಮ ಬಾಲ್ಯದ ಅನೇಕ ವರುಷಗಳನ್ನು ಪಿರಿಯಾಪಟ್ಟಣದಲ್ಲಿಯೇ ಕಳೆದು ಪಿರಿಯಾಪಟ್ಟಣದವರೇ ಎನಿಸಿಕೊಂಡಿರುತ್ತಾರೆ. ರಾಜ್ಯ ಪ್ರಶಸ್ತಿ ಹಾಗೂ 'ರಾಜ್ಯ ಸಂಗೀತ ವಿದ್ವಾನ್' ಪುರಸ್ಕೃತರಾಗಿದ್ದಾರೆ.

ಖ್ಯಾತ ಪಿಟೀಲುವಾದಕ ನಾರಾಯಣಸ್ವಾಮಿನಾಯ್ಡು ಅವರು ಬಿಡಾರಂ ಕೃಷ್ಣಪ್ಪನವರ ಶಿಷ್ಯರಾಗಿದ್ದು ೨೦ನೆಯ ಶತಮಾನದ ಆರಂಭಕಾಲದ ವಿದ್ವಾಂಸರೆಂದು ಹೆಸರುಗಳಿಸಿದ್ದರು. ಮೈಸೂರನ್ನು ಬಿಟ್ಟು ಪಿರಿಯಾಪಟ್ಟಣಕ್ಕೆ ಆಗಮಿಸಿ ಅಲ್ಲಿಯೇ ನೆಲೆಸಿ, ಅನೇಕ ಜನ ಸಂಗೀತಗಾರರನ್ನು ರೂಪಿಸಿದ್ದಾರೆ. ಅವರ ಶಿಷ್ಯರಲ್ಲಿ ಕೊಳಲುವಾದಕ ಪಿ.ಎಸ್. ಶ್ಯಾಮಣ್ಣ ಹಾರ್ಮೋನಿಯಂ ವಾದಕ ಹೆಚ್.ಜಿ. ನಾರಾಯಣಮೂರ್ತಿ ಮತ್ತು ಹಾಡುಗಾರಿಕೆಯಲ್ಲಿ ಪ್ರಸಿದ್ಧರಾಗಿದ್ದ ಪಿ.ಕೆ. ಸುಬ್ರಹ್ಮಣ್ಯ ಪಿ.ಎಸ್. ತಿಮ್ಮಪ್ಪಯ್ಯ, ಪಿ.ಟಿ. ವೆಂಕಟರಮಣಯ್ಯ, ಪಿ.ಎಸ್. ವೆಂಕಟರಾಮಯ್ಯ, ಸುಂದರಮ್ಮ ಮೊದಲಾದರು ಪ್ರಮುಖರಾಗಿದ್ದಾರೆ. ಆರ್.ಎಸ್.ವಿ. ರಾಮಯ್ಯನವರು ಪಿರಿಯಾಪಟ್ಟಣದ ಇನ್ನೊಬ್ಬ ಪ್ರಮುಖ ಸಂಗೀತಗಾರರು. ಒಂಟಿರಾಮಯ್ಯನವರೆಂದು ಕರೆಯಲ್ಪಡುತ್ತಿದ್ದ ಇವರು ೧೮೯೭ರಲ್ಲಿ ಜನಿಸಿದರು. ಅನೇಕ ವಿದ್ಯಾರ್ಥಿಗಳಿಗೆ ಸಂಗೀತವನ್ನು ಕಲಿಸುತ್ತಿದ್ದರು. ಆಕಾಶವಾಣಿ ಕಲಾವಿದರಾಗಿದ್ದ ಪಿ.ಆರ್. ಕೇಶವಮೂರ್ತಿಗಳು, ಪಿ.ಕೆ. ಸುಬ್ರಹ್ಮಣ್ಯಂ, ಹೆಚ್.ಜಿ. ನಾರಾಯಣಮೂರ್ತಿ ಮುಂತಾದವರು ಇವರ ಶಿಷ್ಯರು. ಪಿ.ಆರ್. ಕೇಶವಮೂರ್ತಿ ಅವರು ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದ ರಾಮಯ್ಯರ್ ಅವರಲ್ಲಿ ಸಂಗೀತಾಭ್ಯಾಸ ಮಾಡಿ, ಬೆಂಗಳೂರು, ಹಂಪೆ,

ಮುಳಬಾಗಿಲುಗಳಲ್ಲಿ ಪುರಂದರದಾಸರ ವೇಷಭೂಷಣ ಧರಿಸಿ ಸುಶ್ರಾವ್ಯವಾದ ಕಂಠದಿಂದ ಪುರಂದರಗೀತೆಗಳನ್ನು ಹಾಡುತ್ತಾ ಪ್ರಶಂಸೆ ಗಳಿಸಿದ್ದರು. ಇವರ ಅನೇಕ ಶಿಷ್ಯರಲ್ಲಿ ಪ್ರಖ್ಯಾತರಾದವರೆಂದರೆ ಸಂಗೀತ ವಿದ್ವಾನ್ ಪಿ.ಆರ್. ನಾರಾಯಣಮೂರ್ತಿ, ಪಿ.ಆರ್. ನಾರಾಯಣಮೂರ್ತಿಗಳು ಅಣ್ಣ ಪಿ.ಆರ್. ಕೇಶವಮೂರ್ತಿ ಅವರಿಂದಲೇ ಬಾಲ್ಯದಿಂದಲೂ ಸಂಗೀತ ಅಭ್ಯಾಸವಮಾಡಿ, ಸಂಗೀತಶಾಸ್ತ್ರ ಹಾಗೂ ಪ್ರಯೋಗಗಳೆರಡರಲ್ಲೂ ಪರಿಣತರಾದರು. ಹಲವಾರು ಸಂಗೀತ ಕಛೇರಿಗಳಲ್ಲಿ ಹಾಡಿದ್ದಾರೆ. ಇವರಿಗೆ "ಗಾನ ಸುಧಾನಿಧಿ" ಎಂಬ ಬಿರುದು ಸಂದಿದೆ. ಇವರು ರಚಿಸಿದ ಅನೇಕ ಕೀರ್ತನೆಗಳು ಜನಪ್ರಿಯವಾಗಿದೆ. ಇವರು ರಾಜ್ಯಮಟ್ಟದ ಅನೇಕ ಬಾಲ್ ಬ್ಯಾಡ್ಮಿಂಟನ್ ಪಂದ್ಯಗಳಲ್ಲಿ ಬಂಗಾರದ ಪದಕಗಳನ್ನು ಪಡೆದಿರುತ್ತಾರೆ. ವೆಂಕಟಲಕ್ಷ್ಮಮ್ಮನವರು ವೀಣಾವಾದನದಲ್ಲಿ ಪರಿಣತರು ಹಾಗೂ ಚೆನ್ನಕೇಶವಯ್ಯನವರ ಶಿಷ್ಯರು. ಇವರ ಅನೇಕ ಶಿಷ್ಯರಲ್ಲಿ ಮಗಳಾದ ಸುಕನ್ಯಪ್ರಭಾಕರ್ ಪ್ರಮುಖರು. ಬೆಟ್ಟದಪುರದ ವೀಣಾರಾಮಸ್ವಾಮಯ್ಯನವರು ಸುಪ್ರಸಿದ್ಧ ವೀಣಾವಿದ್ವಾಂಸರಾಗಿದ್ದರು. ಬೆಟ್ಟದಪುರ, ಮೈಸೂರು, ಬೆಂಗಳೂರು ಇತ್ಯಾದಿ ಸ್ಥಳಗಳಲ್ಲಿ ಖ್ಯಾತನಾಮರಾಗಿದ್ದು ಅನೇಕ ಕಛೇರಿಗಳನ್ನು ನಡೆಸಿಕೊಟ್ಟು ಮಠ ಮಾನ್ಯಗಳಿಂದ ಗೌರವ ಪ್ರಶಸ್ತಿಗಳನ್ನು ಪಡೆದು ಕೀರ್ತಿಶೇಷರಾಗಿದ್ದಾರೆ. ಬಿ.ಎನ್. ಶ್ರೀನಿವಾಸಯ್ಯನವರು ಸಂಗೀತಗಾರರಾಗಿ ಅನೇಕ ಸ್ಥಳಗಳಲ್ಲಿ ಸಂಗೀತ ಕಛೇರಿಯನ್ನು ಮಾಡುತ್ತಿದ್ದರು. ಬಿ.ಜಿ. ಶ್ರೀನಿವಾಸ್ ಅವರು ಸುಪ್ರಸಿದ್ಧ ಕೊಳಲುವಾದಕರಾದ ಮಹಾಲಿಂಗಂ ಅವರ ಶಿಷ್ಯ ಪರಂಪರೆಯ ಒಂದು ಕೊಂಡಿಯಾಗಿದ್ದಾರೆ. ಶ್ರೀನಿವಾಸರು ಹಾಲಿ ಬೆಂಗಳೂರಿನಲ್ಲಿ ವಾಸವಾಗಿದ್ದು ತಮ್ಮ ಕೊಳಲುವಾದನದಿಂದ ರಾಜ್ಯಮಟ್ಟದ ಶ್ರೇಷ್ಠ ಸಂಗೀತಗಾರರಾಗಿದ್ದಾರೆ. ಇವರು ಮೂಲತಃ ಇದೇ ತಾಲ್ಲೂಕಿನ ಬೆಟ್ಟದಪುರದವರು.

ಪಿರಿಯಾಪಟ್ಟಣದ ಮತ್ತೊಬ್ಬ ಸಂಗೀತ ವಿದುಷಿಯೆಂದರೆ ಸ್ವರ್ಣಸುಬ್ರಹ್ಮಣ್ಯಂ. ಇವರ ಜನ್ಮಸ್ಥಳ ಬಸವಾಪಟ್ಟಣ. ಬಾಲ್ಯದಿಂದಲೇ ಬಸವಾಪಟ್ಟಣದ ಆನಂದ್ ಎಂಬ ವಿದ್ವಾಂಸರಿಂದ ಸಂಗೀತ ಅಭ್ಯಾಸಮಾಡಿದರು. ನಂತರ ಸಂಗೀತ ವಿದುಷಿ ಚಂದ್ರಿಕಾ, ಸಂಗೀತ ವಿದುಷಿ ಸುಕನ್ಯ ಪ್ರಭಾಕರ್ ಅವರಲ್ಲಿ ಉನ್ನತ ಸಂಗೀತ ಶಿಕ್ಷಣ ಪಡೆದಿದ್ದಾರೆ. ಅನೇಕ ಸಂಗೀತ ಕಛೇರಿಗಳನ್ನು ನೀಡಿದ್ದಾರೆ. ವೇಣು ವಾದಕರಾದ ಎಂ.ಎ. ಚೆನ್ನಪ್ಪಾಚಾರ್ ಉಪಾಧ್ಯಾಯ ವೃತ್ತಿಯಿಂದ ನಿವೃತ್ತರಾಗಿ ಸಂಗೀತಸೇವೆಯನ್ನು ನಡೆಸುತ್ತಿದ್ದಾರೆ. ಕೆ.ಆರ್. ರಾಮಚಂದ್ರರವರು ತಾಲೂಕಿನ ಪ್ರಮುಖ ತಬಲವಾದಕರು. ಅಣ್ಣಯ್ಯ ಮೇಷ್ಟ್ರು (ಸೂರ್ಯನಾರಾಯಣರಾವ್) ತಾಲೂಕಿನ ಗಮನಾರ್ಹ ಸಂಗೀತ ಕಲಾವಿದರು. ತಾಲೂಕಿನ ರಾವಂದೂರಿನಲ್ಲಿ ಅನೇಕ ನೃತ್ಯ ಕಲಾವಿದರಿದ್ದಾರೆ. ಕುಮಾರಿ ಲಕ್ಷ್ಮಿ, ರಾಮುಕಣಗಾಲ್ ಮತ್ತು ತ್ರಿವೇಣಿ ಕಣಗಾಲ್ ಅವರು ಗಮನಾರ್ಹ ಕಲಾವಿದರು.

**ಗಮಕ :** ಸಂಗೀತ–ಸಾಹಿತ್ಯದ ಎರಡರ ಸಮ್ಮಿಳತವೇ ಗಮಕ. ರಾಮಾಯಣ, ವ್ಯಾಸಭಾರತ, ಕುಮಾರವ್ಯಾಸನ ಕರ್ನಾಟಕ ಭಾರತ ಕಥಾಮಂಜರಿ, ಶಿವಪುರಾಣ, ಲಕ್ಷ್ಮೀಶನ ಜೈಮಿನಿ ಭಾರತ, ಕುವೆಂಪು ಅವರ 'ಶ್ರೀ ರಾಮಾಯಣದರ್ಶನಂ' ಮುಂತಾದವನ್ನು

ಜನಸಾಮಾನ್ಯರಿಗೆ ಪರಿಚಯಿಸುವ ಕಾವ್ಯವಾಚನ ಪುರಾತನ ಕಲೆ. ತಾಲೂಕಿನಾದ್ಯಂತ ಗಮಕ ಕಲಾವಿದರಿದ್ದಾರೆ. ಬೆಟ್ಟದತುಂಗದ ಟಿ. ಚಿಕ್ಕದೇವರಾಜ ಅರಸ್ ಅವರು, ತಮ್ಮಡಿ ಹಳ್ಳಿಯ ದೇವಪ್ಪನವರು, ಕಲ್ಯಾಣಿಗೌಡನ ಕೊಪ್ಪಲಿನ ದೇವಗೌಡರು, ಮರದೂರು ಕೊಪ್ಪಲು ಶಿಲ್ಪಾಚಾರ್, ಬಾವಲಾಳ ಪಟೇಲ್ ರಾಮರಾಜು ಅರಸುರವರು, ರಾವಂದೂರು ಹೊಸಳ್ಳಿ ಸಣ್ಣಪುಟ್ಟಯ್ಯನವರು ಬೆಟ್ಟದಪುರದ ಶಾಮಣ್ಣನವರು ಮಾಕೋಡು ಪುಟ್ಟಬಸಪ್ಪನವರು ರಾವಂದೂರು ದೊಡ್ಡಕೊಪ್ಪಲು ಬಿಳಿತಮ್ಮೇಗೌಡರು, ನೀಲಂಗಾಲ ಶೆಟ್ಟಿಹಳ್ಳಿಯ ಹೊಲದೇಗೌಡರು, ಕಂಪಲಾಪುರದ ಕೆ.ಎಂ. ರಾಜೇಗೌಡರು, ಮಾ. ವೆಂಕಟೇಶಯ್ಯನವರು, ವಡ್ಡರಹಳ್ಳಿ ಗಡತಮ್ಮೇಗೌಡರು, ನಂದೀಪುರದ ಚಿಕ್ಕೇಗೌಡರು, ಅಂಗಡಿಪುಟ್ಟಣ್ಣ, ಹಬಟೂರು ಚಿಕ್ಕೀರಪ್ಪ, ಅಪ್ಪಣ್ಣಿ, ರಾಜನ ಬಿಳಗುಲಿ, ರಾಜೇಅರಸ್, ಶಿವಣ್ಣಾಚಾರ್ ಮುಂತಾದವರು ತಾಲೂಕಿನ ಹೆಸರಾಂತ ಗಮಕಿಗಳು. ರಸೋಚಿತವಾದ ರಾಗಗಳನ್ನು ಸಂಯೋಜಿಸಿ ಸಹೃದಯರ ಮನಮುಟ್ಟುವಂತೆ ಕಾವ್ಯಗಾಯನ ಮಾಡುವ ಕಲೆಯೂ ಇತರರಂತೆ ಪಿರಿಯಾಪಟ್ಟಣದ ಗಮಕಿಗಳಲ್ಲೂ ಇದೆ. ಪುನಾಡಹಳ್ಳಿ ಮೂಲೆಮನೆ ತಿಮ್ಮೇಗೌಡರು, ಜವನೀಕುಪ್ಪೆ ವಿ. ತಿಮ್ಮೇಗೌಡರ ಚಿಕ್ಕದೇವರಾಜ ಅರಸು ಅವರು, ಟಿ. ನಾರಾಯಣರಾಜ ಅರಸ್ ಅವರು, ಗಂಗೂರಿನಲ್ಲಿರುವ ಗಮಕಿಗಳೆಂದರೆ ಮಾಳಿಗೇಗೌಡ, ಕಾಳೇಗೌಡ, ನಿಂಗೇಗೌಡರು, ಜವರಪ್ಪನವರು, ಸೀಗಡಿಕಟ್ಟೆ ರಾವಂದೂರಿನ ಚಂದ್ರಶೇಖರಾರಾಧ್ಯರು. ಹರಳಹಳ್ಳಿ, ಪುಟ್ಟಮಲ್ಲಶಟ್ಟರು, ಹರಿಲಾಪುರದ ಅಪ್ಪಾಜಿಗೌಡರು. ನಿಲಂಗಾಲದ ಮರೀಗೌಡ ದೊಡ್ಡಮಲ್ಲಯ್ಯ ಭೋಗನಹಳ್ಳಿಯ ಅಣ್ಣಯ್ಯಾಚಾರ್, ಅತ್ತಿಗೋಡು ಆಚಾರ್ಯರಾಜು, ಸಂಗರಶೆಟ್ಟಿಹಳ್ಳಿಯ ಮಾಸ್ಟರ್ ಸಣ್ಣೆಗೌಡರು, ಸಣ್ಣಕಾಳೇಗೌಡರು, ಹರೀನಹಳ್ಳಿಯ ಕಪನೀಗೌಡರು, ಶಿವರಾಮೇಗೌಡರು, ಅಡವಿ ಜವರೇಗೌಡರು, ಭುವನಹಳ್ಳಿ ಶಿವನಂಜಾಚಾರಿಯವರು ಮತ್ತು ಬೆಕ್ಕರೆಯ ಮಾಸ್ಟರ್ ಸೋಮೇಗೌಡರವರು. ಇವರಲ್ಲದೆ ಶನಿಕಥಾ ವಾಚನ ಮಾಡುವ ಸುಮಾರು ನೂರಕ್ಕೂ ಹೆಚ್ಚು ಕಲಾವಿದರು ತಾಲೂಕಿನಲ್ಲಿದ್ದಾರೆ.

**ವಾಸ್ತುಶಿಲ್ಪ :** ಈ ತಾಲೂಕನ್ನು ಆಳಿದ ರಾಜಮನೆತನಗಳು ತಾಲೂಕಿನಾದ್ಯಂತ ಅನೇಕ ದೇವಾಲಯ, ಕೆರೆಕಟ್ಟೆ, ಬಾವಿ, ಬಸದಿ, ಮಠ, ಅಗ್ರಹಾರಗಳನ್ನು ಸ್ಥಾಪಿಸಿವೆ. ಇಲ್ಲಿರುವ ಪ್ರಾಚೀನ ದೇವಾಲಯಗಳು ವೈಷ್ಣವ, ಶೈವ ಮತ್ತು ಜೈನಧರ್ಮಕ್ಕೆ ಸೇರಿದವುಗಳಾಗಿವೆ. ವಾಸ್ತುಶೈಲಿಯ ದೃಷ್ಟಿಯಿಂದ ತಾಲೂಕಿನಲ್ಲಿ ಮೂಲತಃ ದ್ರಾವಿಡಶೈಲಿ ಬಳಕೆಯಲ್ಲಿದ್ದು, ಹೊಯ್ಸಳರ ಕಾಲದಲ್ಲಿ ಅಭಿಜಾತ ಶೈಲಿಗಳ ಬಳಕೆಯೂ ಈ ಪ್ರಾಂತ್ಯದಲ್ಲಿ ಕಂಡುಬರುತ್ತದೆ. ದೇವಾಲಯಗಳ ನಿರ್ಮಾಣದಲ್ಲಿ ಗಂಗರು, ಚೋಳರು, ವಿಜಯನಗರ ಅರಸರು, ಗ್ರಾನೈಟ್ ಕಲ್ಲನ್ನು ಮತ್ತು ಸುಣ್ಣಗಾರೆ ಇಟ್ಟಿಗೆಯನ್ನು ಬಳಸಿದ್ದಾರೆ. ಹೊಯ್ಸಳರು ಬಳಪದ ಕಲ್ಲನ್ನು, ಮೈಸೂರಿನ ಒಡೆಯರು ಗ್ರಾನೈಟ್ ಕಲ್ಲು ಮತ್ತು ಇಟ್ಟಿಗೆ, ಸುಣ್ಣದ ಗಾರೆಯನ್ನು ಹೆಚ್ಚಾಗಿ ಬಳಸಿದ್ದಾರೆ. ಇದೇ ರೀತಿ ಹೈದರಾಲಿ, ಟಿಪ್ಪು ಸುಲ್ತಾನರ ಕಾಲದಲ್ಲೂ ಬಳಸಲಾಗಿದೆ. ಹೊಯ್ಸಳರ ಕಾಲದಲ್ಲಿ ಕೆತ್ತನೆಯ ಕೆಲಸಕ್ಕೆ ಹೆಚ್ಚು ಅನುಕೂಲವಾಗುವಂತಹ ಬಳಪದ ಕಲ್ಲನ್ನು ಬಳಸಿದ್ದಾರೆ. ನಕ್ಷತ್ರಾಕಾರದ ಎತ್ತರದ

ಜಗತಿಯ ಮೇಲೆ ದೇವಾಲಯಗಳನ್ನು ನಿರ್ಮಿಸಲಾಗಿದ್ದು, ಸುತ್ತಲೂ ಪ್ರದಕ್ಷಿಣಾಪಥವಿದೆ. ಗೋಡೆ ಕಂಬಗಳ ಮೇಲೆ ಸುಂದರ ಕೆತ್ತನೆಗಳಿವೆ.

ತಾಲೂಕಿನಾದ್ಯಂತ ಪ್ರತಿಯೊಂದು ಹಳ್ಳಿಗಳಲ್ಲಿಯೂ ಬಸವೇಶ್ವರ, ದೊಡ್ಡಮ್ಮ, ಚಿಕ್ಕಮ್ಮಗಳ ಗುಡಿಗಳು, ಮಾರಿದೇವಾಲಯ, ಹನುಮಂತೇಶ್ವರ ದೇವಾಲಯ ಹೀಗೆ ಹಲವಾರು ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವು ಹಳ್ಳಿಗಳ ಕೆಲವು ಪ್ರಮುಖ ದೇವಾಲಯಗಳನ್ನು ಮಾತ್ರ ಇಲ್ಲಿ ಗುರುತಿಸಲಾಗಿದೆ.

ಪಿರಿಯಾಪಟ್ಟಣದ ಕೋಟೆಯ ಚೆನ್ನಕೇಶವ ದೇವಾಲಯ, ಮಸಣೀಕಮ್ಮನ ದೇವಾಲಯ, ವೈದ್ಯನಾಥೇಶ್ವರ ದೇವಾಲಯ, ಬೆಕ್ಕರೆ ಗ್ರಾಮದ ಬಸವೇಶ್ವರ ದೇವಾಲಯ, ಕುಡುಕೂರಿನ ಬಸವೇಶ್ವರ ದೇವಾಲಯ, ಆಯತನಹಳ್ಳಿಯಲ್ಲಿ ಬಸವೇಶ್ವರ ದೇವಾಲಯ, ಸೂಳೆಕೋಟೆಯ ಆಂಜನೇಯ ದೇವಾಲಯ, ಬೆಟ್ಟದ ತುಂಗದಲ್ಲಿ ಆದಿ ತೀರ್ಥಂಕರ ಬಸದಿ, ವೀರಭದ್ರೇಶ್ವರ ದೇವಾಲಯವಿದೆ. ಬೂವನಹಳ್ಳಿಯಲ್ಲಿ ಆದಿನಾಥ ತೀರ್ಥಂಕರ ಬಸದಿ, ಕೊಣಸೂರಿನ ಶಾಂತಿನಾಥ ಬಸದಿ, ಹಿಟ್ನೆ ಹೆಬ್ಬಾಗಿಲಿನ ಚೆನ್ನಕೇಶವ ದೇವಾಲಯ, ಆನಿವಾಳು ಬೆಟ್ಟದ ಮೇಲಿನ ಬಸದಿ, ಸಂಗರಶೆಟ್ಟಿಹಳ್ಳಿಯ ಈಶ್ವರ ದೇವಾಲಯ, ಕಂಪಲಾಪುರದ ದೇವಾಲಯ, ರಾವಂದೂರು ಅರ್ಜುನೇಶ್ವರ ದೇವಾಲಯ ಮತ್ತು ಬಸದಿ, ರಾವಂದೂರಿನ ಉತ್ತರ ದಿಕ್ಕಿನ ಶಿವದೇವಾಲಯ, ಕಿತ್ತೂರಿನ ನಾರಾಯಣಸ್ವಾಮಿ ದೇವಾಲಯ ಮತ್ತು ಸೋಮೇಶ್ವರ ದೇವಾಲಯ, ಬೆಟ್ಟದಪುರದ ಶಿಡ್ಲುಮಲ್ಲಿಕಾರ್ಜುನಸ್ವಾಮಿ ದೇವಾಲಯ, ಪವಾಡ ಬಸವೇಶ್ವರ ದೇವಾಲಯ, ರಾಮದೇವಾಲಯ, ಚಿಕ್ಕ ಹೊನ್ನೂರಿನ ಹೊನ್ನೂರಯ್ಯನ ಬೆಟ್ಟದ ನಾರಾಯಣಸ್ವಾಮಿಯ ದೇವಾಲಯ.

**ಶಿಲ್ಪಕಲೆ :** ಕಿರುನೆಲ್ಲಿ ಗ್ರಾಮದ ಪುಟ್ಟಣ್ಣಾಚಾರ್ ಶಿಲ್ಪಶಾಸ್ತ್ರ ಪಾರಂಗತರು. ಗುರುಕುಲದಲ್ಲಿ ಅಭ್ಯಾಸಮಾಡಿ, ಹತ್ತಾರು ಮಂದಿ ಶಿಷ್ಯರನ್ನು ಬೆಳೆಸಿದರು. ಅಮೆರಿಕಾ ಹಾಗೂ ಆಗ್ನೇಯ ಏಷ್ಯಾ ರಾಷ್ಟ್ರಗಳಿಗೂ ಇವರ ಶಿಲ್ಪಗಳು ರಫ್ತಾಗುತ್ತಿವೆ. ಇವರಿಗೆ ಕೀರ್ತಿತಂದ ಶ್ರೀಕೇಶವ, ದಕ್ಷಿಣಾಮೂರ್ತಿ, ಶೃಂಗೇರಿ ಶಾರದಾಂಬ ಇತ್ಯಾದಿ ವಿಗ್ರಹಗಳು ನಾನಾಕ್ಷೇತ್ರಗಳಲ್ಲಿ ಪ್ರತಿಷ್ಠೆಯಾಗಿವೆ. ತಾಲೂಕಿನ ಹಿರಿಯ ಶಿಲ್ಪಿಗಳಾದ ಇವರಿಗೆ ಶಿಲ್ಪಶ್ರೀ, ಹಾಗೂ ಶಿಲ್ಪಶಾಸ್ತ್ರಪ್ರವೀಣ ಬಿರುದು ಹಾಗೂ ರಾಜ್ಯಪ್ರಶಸ್ತಿ ಸಂದಿವೆ.

**ಚಿತ್ರಕಲೆ :** ತಾಲೂಕಿನಲ್ಲಿ ಅನೇಕ ಚಿತ್ರಕಲಾವಿದರಿದ್ದಾರೆ. ಅವರಲ್ಲಿ ಕಂಪಲಾಪುರದ ಸುಬ್ಬಣ್ಣಶೆಟ್ಟರ ಮಗ ಮಲ್ಲಪ್ಪ ಒಬ್ಬರು. ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಚಿತ್ರಕಲಾ ವ್ಯಾಸಂಗ ಮಾಡಿ ಹವ್ಯಾಸಿ ಕಲಾವಿದರಾದ ಇವರು ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ.

**ಕೀರ್ತನ ಕಲಾವಿದರು :** ಹರಿಕಥೆಯು ಪಂಡಿತರಿಗೂ – ಪಾಮರರಿಗೂ ರಂಜನೆ ನೀಡುವಂತಹದ್ದು. ಎಚ್.ಜಿ. ಶ್ರೀಕಂಠಯ್ಯ ಅವರು ತಾಲೂಕಿನ ಹಿರಿಯ ಕೀರ್ತನ ಕಲಾವಿದರು. ಭಕ್ತಮಯೂರ ಧ್ವಜ, ಶನಿಮಾಹಾತ್ಮೆ, ಭೂಕೈಲಾಸ, ಸುಭದ್ರಾಪರಿಣಯ

ಇತ್ಯಾದಿ ರಾಮಾಯಣ ಮತ್ತು ಮಹಾಭಾರತ, ಭಾಗವತಗಳ ಕಥಾ ಕಾರ್ಯಕ್ರಮಗಳನ್ನು ಮೈಸೂರು ಮತ್ತು ಕೊಡಗು ಜಿಲ್ಲಾದ್ಯಂತ ನಡೆಸಿಕೊಟ್ಟಿರುತ್ತಾರೆ. ಗಜಗೌರಿವ್ರತ, ದೂರ್ವಾಸರ ಶಾಪ ಕಥೆಗಳು ಧ್ವನಿಮುದ್ರಿತಗೊಂಡು ಕ್ಯಾಸೆಟ್‌ಗಳಾಗಿವೆ. ಕೀರ್ತನ ರಂಗಕ್ಕೆ ಸಲ್ಲಿಸಿರುವರ ಅಪಾರ ಸೇವೆಗೆ ಅನೇಕ ಸಂಘಸಂಸ್ಥೆಗಳಿಂದ ಸನ್ಮಾನ ಪಡೆದಿದ್ದಾರೆ. ಪುಟ್ಟಸೋಮಾಚಾರ್ ಅವರು ಹರಿಕಥಾದಾಸರು ಮತ್ತು ನಾಟಕೋಪಾಧ್ಯಾಯರು. ಪ್ರಸಿದ್ಧ ಹಾರ್ಮೋನಿಯಂ ವಾದಕರು. ಸ್ವತಃ ನಾಟಕ ರಚನಕಾರರಾದ ಇವರು ನಿಲಂಗಾಲ, ಶೆಟ್ಟಿಹಳ್ಳಿ, ನಂದೀಪುರ, ಮತ್ತಿತರ ಊರುಗಳಲ್ಲಿ ರಾಮಾಯಣ, ದಾನಶೂರಕರ್ಣ, ಕುರುಕ್ಷೇತ್ರ, ವಿರಾಟಪರ್ವ, ಕೃಷ್ಣಲೀಲೆ, ಹರಿಶ್ಚಂದ್ರ, ಗಯಚರಿತ್ರೆ, ಶನಿಮಹಾತ್ಮೆ, ಶ್ರೀಕೃಷ್ಣಪಾರಿಜಾತ ಇಂಥ ಹಲವು ನಾಟಕಗಳನ್ನು ನಿರ್ದೇಶಿಸಿ, ಪ್ರದರ್ಶನ ನೀಡಿದ್ದಾರೆ. ಬೂವನಹಳ್ಳಿಯ ಶರ್ಮ ಅವರು ಹರಿಕಥಾ ವಿದ್ವಾಂಸರು. ಅಕ್ಕಮಹಾದೇವಿ, ಶಿವಪುರಾಣ, ಭಕ್ತಮಾರ್ಕಂಡೇಯ, ಸ್ವರ್ಗಾರೋಹಣ ಮತ್ತಿತರ ಕಥೆಗಳು ಇವರಿಂದ ನಿರೂಪಿಸಲ್ಪಡುತ್ತವೆ. ಶಿವರಾಮಯ್ಯನವರು ಹರಿಕಥಾ ವಿದ್ವಾಂಸರಲ್ಲದೆ ಶನಿಮಹಾತ್ಮೆ ಕಥೆಯನ್ನು ವಾಚಿಸುತ್ತಾರೆ. ರಾವಂದೂರಿನ ಸಿ.ಎಲ್. ಕಾಳೇಗೌಡರು ಹರಿದಾಸರಾಗಿ, ಕಥಾ ಕೀರ್ತನೆಯಿಂದ ಜನಮೆಚ್ಚುಗೆ ಪಡೆದಿದ್ದಾರೆ. ಇವರು ಹಾರ್ಮೋನಿಯಂ, ತಬಲ, ಪಿಟೀಲುವಾದಕರು ಅಲ್ಲದೆ ನಾಟಕದ ಮಾಸ್ಟರು ಆಗಿದ್ದಾರೆ. ಕಂಪಲಾಪುರದ ರಾಮಚಂದ್ರ ಅವರು ತಬಲವಾದಕರಾಗಿ ಸುಮಾರು ೩೫ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ನಾಟಕರಂಗದಲ್ಲಿಯೂ ಸೇವೆ ಸಲ್ಲಿಸಿದ್ದಾರೆ.

## ಪತ್ರಿಕೋದ್ಯಮ

ಜೋಗನಹಳ್ಳಿ ಗುರುಮೂರ್ತಿಯವರ ಸಂಪಾದಕತ್ವದಲ್ಲಿ “ರೈತ ರಾಯಭಾರಿ” ಎಂಬ ಪತ್ರಿಕೆಯು ತಾಲೂಕಿನ ಪ್ರಪ್ರಥಮ ವಾರಪತ್ರಿಕೆಯಾಗಿ ಪ್ರಕಟವಾಯಿತು. ಪ್ರಸ್ತುತ ತಾಲೂಕಿನಲ್ಲಿ ‘ದಾರಿದೀಪ’, ‘ಪಿರಿಯಾದೊರೆ’, ‘ಅರುಣ್ ಹಿಂದೂಸ್ಥಾನ್’, ‘ಹಲೋ ದೊರೆ’ ಮತ್ತು ‘ದೇವದೂತ’ ಎಂಬ ಐದು ವಾರಪತ್ತಿಕೆಗಳು ಇದ್ದರೂ ‘ದಾರೀದೀಪ’ ಮತ್ತು ‘ದೇವದೂತ’ ಪತ್ರಿಕೆಗಳು ಮಾತ್ರ ಚಾಲ್ತಿಯಲ್ಲಿವೆ.

ರೈತ ಚಳವಳಿಗೆ ಮೀಸಲಾದ “ರೈತ ರಾಯಭಾರಿ” ಪತ್ರಿಕೆಯು ೧೯೮೨ರ ಅಕ್ಟೋಬರ್‌ನಲ್ಲಿ ಬೆಂಗಳೂರಿನ ಲಾಲ್‌ಬಾಗ್ ಮೈದಾನದಲ್ಲಿ ನಡೆದ ರೈತ ಸಮಾವೇಶದಲ್ಲಿ ವಿಶೇಷ ಸಂಚಿಕೆ ತರುವುದರೊಂದಿಗೆ ಪ್ರಾರಂಭವಾಯಿತು. ಪತ್ರಿಕೆಯು ಪ್ರಾರಂಭದಲ್ಲಿ ಮೈಸೂರಿನ ಒಂಟಿಕೊಪ್ಪಲ್‌ನ ಅನುಪಮ ಮುದ್ರಣಾಲಯದಲ್ಲಿ ಅಚ್ಚಾಗುತ್ತಿದ್ದು, ಒಂದು ವರ್ಷದ ನಂತರ ಕೆ.ಆರ್. ನಗರದ ಪಟೇಲ್ ಪ್ರಿಂಟರ್ಸ್‌ಗೆ ಬದಲಾವಣೆಗೊಂಡು ಆರು ತಿಂಗಳ ಬಳಿಕ ಸ್ಥಗಿತವಾಯಿತು.

ಕಂಪ್ಲಾಪುರ ಮೋಹನ್ ಅವರ ‘ದಾರಿದೀಪ’ ಪ್ರಾರಂಭದಲ್ಲಿ ಪಿರಿಯಾಪಟ್ಟಣದ ಸುನಿಲ್ ಪ್ರಿಂಟರ್ಸ್‌ನಲ್ಲಿ ಒಂದು ವರ್ಷದವರೆಗೆ ನಡೆಯಿತು. ೧೯೮೫ರ ಫೆಬ್ರವರಿಯಲ್ಲಿ ಖ್ಯಾತ ನಿರ್ದೇಶಕ ಪುಟ್ಟಣ ಕಣಗಾಲ್ ಅವರು ಉದ್ಘಾಟಿಸಿದ ‘ಸಂತೋಷ್ ಮುದ್ರಣಾಲಯ’ದಿಂದ ನಿರಂತರವಾಗಿ ಪ್ರಕಟವಾಗುತ್ತಿದೆ.

ಇಂದೂಧರ ಹೊನ್ನಾಪುರ ಇವರು ೧೯೭೭ರಲ್ಲಿ ಪ್ರಜಾವಾಣಿ ಪತ್ರಿಕೆಯ ವರದಿಗಾರರಾಗಿ ಪತ್ರಿಕಾ ಕ್ಷೇತ್ರವನ್ನು ಪ್ರವೇಶಿಸಿ ೧೯೮೩ರಲ್ಲಿ ಮುಂಗಾರು ಪತ್ರಿಕೆಯ ನಿರ್ವಾಹಕ ಸಂಪಾದಕರಾಗಿ ಎರಡು ವರ್ಷಗಳ ಕಾಲ ತಮ್ಮ ಸೇವೆ ಸಲ್ಲಿಸಿದರು. ನಂತರ 'ಸುದ್ದಿಸಂಗಾತಿ' ವಾರ ಪತ್ರಿಕೆಗೆ ೧೯೮೫–೧೯೯೪ ರವರೆಗೆ ಸಂಪಾದಕರಾಗಿದ್ದರು. ಈಗ ಆ ಪತ್ರಿಕೆ ಸ್ಥಗಿತಗೊಂಡಿದೆ. ೧೯೯೯ರ ಸೆಪ್ಟೆಂಬರ್‌ನಿಂದ ಎನ್.ಪಿ.ಹರೀಶ್ ಸಂಪಾದಕತ್ವದ 'ಪಿರಿಯಾದೊರೆ' ಪತ್ರಿಕೆ ಪ್ರಕಾಶನವಾಗುತ್ತಿದೆ. ಇದು ಹೆಚ್ಚಾಗಿ ಕ್ರೈಂಗೆ ಸಂಬಂಧಿಸಿದ ವರದಿಗಳನ್ನು ಪ್ರಕಟಿಸುತ್ತಿದೆ. ಇತ್ತೀಚೆಗೆ ಇದು ಅನಿಯತಕಾಲಿಕೆಯಾಗಿ ಬರುತ್ತಿದೆ. ಕಂಠಾಪುರದ ಅರುಣ್ ಹಿಂದೂಸ್ಥಾನ್‌ರ "ಅರುಣ್ ಹಿಂದೂಸ್ಥಾನ್" ವಾರಪತ್ರಿಕೆ ಎಂಬ ಹೆಸರಿನಿಂದ ಪ್ರಕಟವಾದರೂ ಅನಿಯತವಾಗಿ ಪ್ರಕಟವಾಗುತ್ತಿದೆ. ಸ್ವಾಮಿ ಮುತ್ತೂರ್ ಅವರು ತಮ್ಮ ಆಪ್ತರೊಡಗೂಡಿ ಪಿರಿಯಾದೊರೆ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯಲ್ಲಿ ಒಂದು ವರ್ಷದ ಕಾಲ ಸುದ್ದಿಸಂಪಾದಕರಾಗಿ ದುಡಿದ ಸ್ವಾಮಿಯವರು ಅನಂತರ ಮಿತ್ರವೃಂದದಿಂದ ಹೊರಬಂದು 'ಹಲೋದೊರೆ' ಎಂಬ ವಾರಪತ್ರಿಕೆಯನ್ನು ಹೊರತಂದರು. ಆದರೆ ಈ ಪತ್ರಿಕೆ ಈಗ ನಿಂತುಹೋಗಿದೆ. ತಾಲೂಕಿನ ಬೇರೆ ಬೇರೆ ಪತ್ರಿಕೆಗಳಲ್ಲಿ ದುಡಿದ ದೇವಣ್ಣನವರು ೨೦೦೨ರಲ್ಲಿ ತಾವೇ ಸಂಪಾದಕರಾಗಿ 'ದೇವದೂತ' ಎಂಬ ವಾರಪತ್ರಿಕೆಯನ್ನು ಪ್ರಕಟಿಸಿದರು. ಮಕ್ಕಳ, ವಿದ್ಯಾರ್ಥಿಗಳ, ರೈತರ, ವ್ಯಾಪಾರಿಗಳ ಕೈಪಿಡಿಯಂತಿರುವ ಈ ಪತ್ರಿಕೆಯಲ್ಲಿ ಧರ್ಮ, ರಾಜಕಾರಣ, ಇತಿಹಾಸ, ಸಂಸ್ಕೃತಿ, ಆರೋಗ್ಯ, ಯೋಗ, ಕ್ರೀಡೆ, ಆಧ್ಯಾತ್ಮ, ಸಾಹಿತ್ಯ ಮುಂತಾದ ವಿಷಯಗಳನ್ನು ಹೊಂದಿದೆ. ತಾಲೂಕಿನ ಏಕೈಕ ಪಾಕ್ಷಿಕ ಪತ್ರಿಕೆಯಾಗಿ ಕೋಗಿಲವಾಣಿ ಕಳೆದ ಐದು ವರ್ಷಗಳಿಂದ ಪ್ರಕಟವಾಗುತ್ತಿದೆ.

## ಚಲನಚಿತ್ರ ಮತ್ತು ಕಿರುತೆರೆ

ಪಿರಿಯಾಪಟ್ಟಣ ತಾಲೂಕು ಚಿತ್ರರಂಗಕ್ಕೆ ಅನೇಕ ಪ್ರತಿಭೆಗಳನ್ನು ಕಾಣಿಕೆಯಾಗಿದೆ. ಚಿತ್ರಶಿಲ್ಪಿ ಪುಟ್ಟಣ ಕಣಗಾಲ್ ಅವರು ನಿರ್ದೇಶಕನಿಗೆ ತಾರಾಮೌಲ್ಯವನ್ನು ತಂದುಕೊಟ್ಟು, "ನಿರ್ದೇಶಕ ಹೀರೋ" ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಚಿತ್ರ ಸಾಹಿತಿ ಸೋರಟ್ ಅಶ್ವಥ್ ಅವರ 'ಕಲಾಜ್ಯೋತಿ' ನಾಟಕ ಸಂಸ್ಥೆಯಲ್ಲಿ ಕೆಲಸ ಮಾಡಿ ಮದರಾಸಿಗೆ ತೆರಳಿ, ಪದ್ಮಿನಿ ಪಿಕ್ಚರ್ಸ್ ಸಂಸ್ಥೆಗೆ ಸೇರಿ, ಬಿ.ಆರ್. ಪಂತುಲು ಅವರ ಬಳಿ ಸಹಾಯಕ ನಿರ್ದೇಶಕರಾಗಿ ದುಡಿದರು. ೧೯೫೭ರಲ್ಲಿ ಸಹನಿರ್ದೇಶಕರಾಗಿ ತಯಾರಿಸಿದ ಮೊದಲ ಚಿತ್ರ 'ರತ್ನಗಿರಿ ರಹಸ್ಯ'. ನಂತರ ಸ್ಕೂಲ್ ಮಾಸ್ಟರ್, ಮಕ್ಕಳರಾಜ್ಯ, ಕಿತ್ತೂರು ಚೆನ್ನಮ್ಮ, ಸಾಕುಮಗಳು ಮೊದಲಾದ ಚಿತ್ರಗಳಿಗೆ ಸಹಾಯಕರಾಗಿ ದುಡಿದು ಅಪಾರ ಅನುಭವ ಪಡೆದರು. ಪುಟ್ಟಣ್ಣನವರ ಮೊದಲ ಸ್ವತಂತ್ರ ನಿರ್ದೇಶನದ ಚಿತ್ರ "ಬೆಳ್ಳಿಮೋಡ" ೧೯೬೭ರಲ್ಲಿ ಬಿಡುಗಡೆಯಾಯಿತು. ಇವರು ಕನ್ನಡದಲ್ಲಿ ಒಟ್ಟು ಇಪ್ಪತ್ಮೂರು ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಕಪ್ಪುಬಿಳುಪು, ಗೆಜ್ಜೆಪೂಜೆ, ಸಾಕ್ಷಾತ್ಕಾರ, ಶರಪಂಜರ, ಧರ್ಮಸೆರೆ, ಪಡುವಾರಹಳ್ಳಿ ಪಾಂಡವರು, ಅಮೃತಘಳಿಗೆ, ಮಾನಸ ಸರೋವರ, ನಾಗರಹಾವು, ಶುಭಮಂಗಳ, ಎಡಕಲ್ಲುಗುಡ್ಡದ ಮೇಲೆ, ರಂಗನಾಯಕಿ, ಬಿಳಿ ಹೆಂಡ್ತಿ, ಉಪಾಸನೆ – ಇವರ

ನಿರ್ದೇಶನದ ಪ್ರಮುಖಚಿತ್ರಗಳಾಗಿವೆ. ಗೆಜ್ಜೆಪೂಜೆ, ಬೆಳ್ಳಿಮೋಡ, ಶರಪಂಜರ, ನಾಗರಹಾವು, ಕಥಾಸಂಗಮ, ರಂಗನಾಯಕಿ – ಈ ಚಿತ್ರಗಳು ರಾಜ್ಯ ಪ್ರಶಸ್ತಿಗಳಿಸಿದ್ದರೆ, ಗೆಜ್ಜೆಪೂಜೆ, ಶರಪಂಜರ – ರಾಷ್ಟ್ರ ಪ್ರಶಸ್ತಿಗಳಿಸಿದ ಚಿತ್ರಗಳು. ಪುಟ್ಟಣ್ಣನವರು ೧೯೮೫ರಲ್ಲಿ ನಿಧನರಾದರು.

ಖ್ಯಾತ ಚಿತ್ರಸಾಹಿತಿ ಹಾಗೂ ನಿರ್ದೇಶಕ ಕಣಗಾಲ್ ಪ್ರಭಾಕರಶಾಸ್ತ್ರಿ ಅವರು ಪುಟ್ಟಣ್ಣ ಕಣಗಾಲರ ಅಣ್ಣ. ರಂಗಭೂಮಿಯಲ್ಲಿ ಮೊದಲು ಸೇವೆಸಲ್ಲಿಸಿ, ನಂತರ ಚಿತ್ರರಂಗ ಪ್ರವೇಶಿಸಿದರು. ಕಣಗಾಲ್ ಪ್ರಭಾಕರ ಶಾಸ್ತ್ರಿಯವರು ಸುಪ್ರಸಿದ್ಧ ಚಲನಚಿತ್ರ ಸಾಹಿತಿ. 'ಪ್ರಚಂಡ ರಾವಣ' ಮುಂತಾದ ಕೃತಿಗಳನ್ನು ರಚಿಸಿರುವ ಇವರಿಗೆ ಶ್ರೇಷ್ಠ ಚಿತ್ರಸಾಹಿತಿ ಪ್ರಶಸ್ತಿ ಹಾಗೂ ಕರ್ನಾಟಕ ರಾಜ್ಯ ಪ್ರಶಸ್ತಿಗಳು ಸಂದಿವೆ. ಇವರ ಮೊದಲ ಚಿತ್ರ 'ಭಾಗ್ಯೋದಯ'. 'ರತ್ನಗಿರಿರಹಸ್ಯ' ಚಿತ್ರಕ್ಕೆ ಚಿತ್ರ ಸಾಹಿತ್ಯ ಬರೆದು ಅತ್ಯುತ್ತಮ ಹೆಸರು ಪಡೆದರು. ರತ್ನಗಿರಿ ರಹಸ್ಯ, ಸ್ಕೂಲ್ ಮಾಸ್ಟರ್, ಸಾಕ್ಷಾತ್ಕಾರ, ಸತಿಶಕ್ತಿ, ಶರಪಂಜರ, ಶ್ರೀ ಕೃಷ್ಣದೇವರಾಯ, ವಾಲ್ಮೀಕಿ, ಮಲಯಮಾರುತ, ಮಲ್ಲಿಮದುವೆ ಮುಂತಾದ ಚಿತ್ರಗಳಿಗೆ ಬರೆದ ಗೀತೆಗಳು ಪ್ರಸಿದ್ಧಿ ಪಡೆದಿವೆ. ಸತಿಶಕ್ತಿ, ಸುಭದ್ರಾಕಲ್ಯಾಣ, ಭಲೇಭಟ್ಟ ಮುಂತಾದವು ಇವರ ನಿರ್ದೇಶನದ ಚಿತ್ರಗಳಾಗಿವೆ.

ಹಾಸ್ಯನಟ ಮುಸುರಿ ಕೃಷ್ಣಮೂರ್ತಿ ಬೆಟ್ಟದಪುರದವರು. ಮೂಲತಃ ಗುಬ್ಬಿ ಕಂಪನಿಯಲ್ಲಿ ನಟರಾಗಿದ್ದು, ಅತ್ಯುತ್ತಮ ರಂಗಗೀತೆಗಳ ಗಾಯಕರೂ ಆಗಿದ್ದರು. 'ವಾಣಿ' (೧೯೪೩) ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಇವರು, 'ಪಡುವಾರ ಹಳ್ಳಿ ಪಾಂಡವರು' ಚಿತ್ರದ 'ಕನೆಕ್ಷನ್ ಕಾಳಪ್ಪ ಪಾತ್ರದಿಂದ ಚಿತ್ರರಂಗದಲ್ಲಿ ಹೆಸರು ಗಳಿಸಿದರು. ಧರ್ಮಸೆರೆ, ನಾನಿನ್ನ ಬಿಡಲಾರೆ, ನಂಬರ್ ಐದೂ ಎಕ್ಕ, ಶುಭಮಂಗಳ, ಬಂಗಾರದಜಿಂಕೆ, ಸುಬ್ಬಿಸುಬ್ಬಕ್ಕ ಸುವ್ವಲಾಲಿ, ಲೀಡರ್ ವಿಶ್ವನಾಥ್, ಕರಿನಾಗ, ಹಣಬಲಮೋ ಜನಬಲಮೊ, ಅನುರಕ್ತಿ, ಬೆಕ್ಕಿನಕಣ್ಣು, ಆಶಾಕಿರಣ, ನನ್ನ ದೇವರು, ರಾಜಮಹಾರಾಜ, ಸಮರ್ಪಣೆ, ಮುಂತಾದ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಮುಸುರಿ ಕೃಷ್ಣಮೂರ್ತಿಯವರು 'ನಂಬರ್ ಐದು ಎಕ್ಕ' ಚಿತ್ರದಲ್ಲಿ ಹಾಡಿದ್ದರು. ಇವರ ಪುತ್ರರಾದ ಜಯಸಿಂಹ ಮುಸುರಿ, ಗುರುದತ್ ಮುಸುರಿಯವರು ತಮ್ಮ ತಂದೆಯಂತೆಯೇ ಚಿತ್ರರಂಗ ಪ್ರವೇಶಿಸಿ, 'ಮುಸುರಿ' ಕಂಬೈನ್ಸ್ ಸಂಸ್ಥೆಯ ಮೂಲಕ ಭರತ್, ವಿಕ್ರಂ, ಅಸ್ತ್ರ ಮುಂತಾದ ಚಿತ್ರಗಳನ್ನು ತಯಾರಿಸಿದ್ದಾರೆ. ಮುಸುರಿ ಕೃಷ್ಣಮೂರ್ತಿಯವರು ಅಭಿನಯಿಸಿದ ಹಲವು ಚಿತ್ರಗಳು ಹಾಗೂ ಅವರ ಜೀವನದ ಘಟನೆಗಳನ್ನು ಆಧರಿಸಿ "ನಟ ಚಾಣಕ್ಯ ಮುಸುರಿ" ಎಂಬ ಚಿತ್ರವನ್ನು ನಿರ್ಮಿಸಲಾಗಿದೆ.

ಪಿ.ಆರ್. ಲಕ್ಷ್ಮಿರಮಣ್ ಮುಂಬೈನ ಕಾರ್ದಾರ್ ಸ್ಟುಡಿಯೋದಲ್ಲಿ ಚಲನಚಿತ್ರ ಛಾಯಾಗ್ರಾಹಕರಾಗಿದ್ದು, ಹಲವಾರು ಹಿಂದಿ ಚಿತ್ರಗಳಿಗೆ ಛಾಯಾಗ್ರಹಣ ಮಾಡಿದ್ದಾರೆ. ಖ್ಯಾತ ಛಾಯಾನಿರ್ದೇಶಕ ವಿ.ಕೆ. ಮೂರ್ತಿಯವರು ಕೆಲಸ ಮಾಡಿದ "ಕಾಗಜ್ ಕೆ ಫೂಲ್" ಚಿತ್ರಕ್ಕೆ ಛಾಯಾಗ್ರಹಣ ಸಹಾಯಕರಾಗಿ ದುಡಿದಿದ್ದಾರೆ. ನಾಗೇಶ್ ಕಂಪ್ಲಾಪುರ ಅವರು ಶಂಕರ್‌ನಾಗ್ ಅವರ 'ಆಕ್ಸಿಡೆಂಟ್' ಚಿತ್ರಕ್ಕೆ ಸಹನಿರ್ದೇಶಕರಾಗಿ ಕೆಲಸ ಮಾಡಿದರು.

ರಂಗನಟಿ ನಿರ್ದೇಶಕಿ ಬಿ.ಜಯಶ್ರೀಯವರ ಸ್ಪಂದನ ತಂಡವನ್ನು ಸೇರಿ 'ಕದಡಿದ ನೀರು' ನಾಟಕಕ್ಕೆ ಕೆಲಸ ಮಾಡಿದರು. ಶಂಕರ್‌ನಾಗ್ ಜತೆ ಸಹನಿರ್ದೇಶಕರಾಗಿ 'ಸಂಕೇತ್' ತಂಡದ ಒಡನಾಡಿಯಾದರು. ಖ್ಯಾತ ನಿರ್ದೇಶಕರಾದ ಪೇರಾಲ, ಜೋಷಿ, ಕೆ.ವಿ.ರಾಜು, ದಿನೇಶ್ ಬಾಬು, ಕೃಷ್ಣಮಾಸಡಿಯವರ ಬಳಿ ಸಹನಿರ್ದೇಶಕರಾಗಿ ಕೆಲಸ ನಿರ್ವಹಿಸಿದಲ್ಲದೆ, ಹಲವಾರು ಚಿತ್ರಗಳಿಗೆ ಸಂಭಾಷಣೆ ರಚಿಸಿ, ನಟಿಸಿಯೂ ಇದ್ದಾರೆ. ಅತಿರಥಮಹಾರಥ, ಇದು ಸಾಧ್ಯ, ಕೂಗು, ಹೆಂಡ್ತಿಗೇಳ್ಬೇಡಿ, ಬ್ರಹ್ಮಾಸ್ತ್ರ, ಕಂಕಣಭಾಗ್ಯ, ಪರಮೇಶಿ ಪ್ರೇಮ ಪ್ರಸಂಗ, ಹೊಸನೀರು, ತಾಯಿ, ಜಾಕಿ, ಅವಸ್ಥೆ ಮತ್ತು ಅಮಿತಾಬಚ್ಚನ್ ನಟಿಸಿರುವ ಹಿಂದಿ ಚಿತ್ರ ಇಂದ್ರಜಿತ್ (ಕಾರ್ಯನಿರ್ವಾಹಕರಾಗಿ) ಮುಂತಾದ ೩೦ಕ್ಕೂ ಹೆಚ್ಚು ಚಿತ್ರಗಳಿಗೆ ಸಹನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಅತ್ತಿಗೋಡು ಗ್ರಾಮದ ಕೆಂಡಗಣ್ಣಶೆಟ್ಟರು ಕನ್ನಡ ಚಿತ್ರರಂಗದಲ್ಲಿ ಪ್ರದರ್ಶಕ, ವಿತರಕರಾಗಿ ಕೆಲಸ ನಿರ್ವಹಿಸಿ, ಸ್ವತಃ ಕಾವೇರಿತೀರದಲ್ಲಿ, ಗೋಲ್ಡ್ ಮೆಡಲ್, ಸಾಮ್ರಾಟ್ ಎಂಬ ಚಿತ್ರಗಳನ್ನು ತಯಾರಿಸಿದ್ದಾರೆ. ಗಿರೀಶ್ ಕಂಪ್ಲಾಪುರ ಅವರು ಎಸ್.ನಾರಾಯಣ್ ಅವರಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಇವರ ಪ್ರಮುಖ ಚಿತ್ರಗಳೆಂದರೆ, ಕಲ್ಯಾಣಿ, ಭಾಮಾ ಸತ್ಯಭಾಮ, ತರೀಕೆರೆ ಏರಿಮೇಲೆ, ಗುಲಾಬಿ, ಸೂರ್ಯವಂಶ, ಜೆಡ್, ತಾಯಿಕೊಟ್ಟಸೀರೆ, ಆತ್ಮಬಂಧನ, ಅಕ್ಕ, ಮುಂತಾದವು. ಕೆಲವು ಚಿತ್ರಗಳಲ್ಲಿ ಇವರು ಸಹನಿರ್ದೇಶನದ ಜತೆಗೆ ನಟನೆಯನ್ನೂ ಮಾಡಿದ್ದಾರೆ. ಕಿರುತೆರೆಯ ಜನಪ್ರಿಯ 'ಪಾರ್ವತಿ' ಧಾರಾವಾಹಿಯ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಸೋದರ ಉಮೇಶ್ ಕಂಪ್ಲಾಪುರ ಅವರು 'ಸ್ವರ್ಗ' ಧಾರಾವಾಹಿಯ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ನವಿಲೂರು ಗ್ರಾಮದ ಮಹದೇವ್ 'ನವಿಲೂರು ಕುಳ್ಳ' ಎಂದು ಹೆಸರಾಗಿದ್ದು, ಗಂಧದ ಗುಡಿ ಭಾಗ–೨, ಅಣ್ಣಾವ್ರ ಮಕ್ಕಳು, ಗಿಡ್ಡುದಾದ ಮುಂತಾದ ಚಿತ್ರಗಳಲ್ಲಿ ಸಹ ಕಲಾವಿದರಾಗಿ ನಟಿಸಿದ್ದಾರೆ. ಚಲನಚಿತ್ರಗಳಲ್ಲದೆ ಕಿರುತೆರೆಯಲ್ಲಿ ಕೆಲಸ ಮಾಡಿರುವ ಮಂಜುಚಾಮರಾಯನಕೋಟೆ 'ಕಾವೇರಿ' ಮುಂತಾದ ಧಾರಾವಾಹಿಗಳಲ್ಲಿ ಅಭಿನಯಿಸಿ, ನಿರ್ಮಾಣ ನಿರ್ವಾಹಕರಾಗಿಯೂ ದುಡಿದಿದ್ದಾರೆ. ಹೊನ್ನಾಪುರದವರಾದ ಇಂದೂಧರ ಹೊನ್ನಾಪುರ ಅವರು 'ಪಾದೋದಕ' ಮತ್ತು 'ಐ ವಿಟ್ನೆಸ್' ಕಿರುಚಿತ್ರಗಳನ್ನು ತಯಾರಿಸಿದ್ದಾರೆ. ಕಿರುತೆರೆಯ ಮತ್ತೊಬ್ಬ ಕಲಾವಿದ ರವೀಂದ್ರನಾಥ ಕಣಗಾಲ್‌ರವರು ಅನೇಕ ಧಾರಾವಾಹಿಯಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ.

* * * *